ಪಂಜುರ್ಲಿ ದೈವದ ಪ್ರಾದಿನ್ಯತೆ, ಪ್ರದರ್ಶನಾತ್ಮಕತೆ: ಮಾನವ ಸಂಪನ್ಮೂಲ ಅಭಿವೃದ್ಧಿ ಆಧಾರಿತ ಅಧ್ಯಯನ

ಪಿಹೆಚ್.ಡಿ. ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ

ಸಂಶೋಧನಾ ಪ್ರಬಂಧದ ಅಂತಿಮ ಸಾರಲೇಖ

ಸಂಶೋಧಕರು

ರವಿ, ಎನ್.

ನೋಂದಣಿ ವರ್ಷ : 2018

ಮಾರ್ಗದರ್ಶಕರು

ಪ್ರೊ. ಸೋಮಣ್ಣ

ಹಿರಿಯ ಪ್ರಾಧ್ಯಾಪಕರು

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ

ಸಹ ಮಾರ್ಗದರ್ಶಕರು

ಪ್ರೊ. ಪರಮೇಶ್ವರ

ಪ್ರಾಧ್ಯಾಪಕರು

ವಾಣಿಜ್ಯಶಾಸ್ತ್ರ ವಿಭಾಗ

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ, ಮಂಗಳೂರು.

2024

ಪಂಜುರ್ಲಿ ದೈವದ ಪ್ರಾದಿನ್ಯತೆ, ಪ್ರದರ್ಶನಾತ್ಮಕತೆ: ಮಾನವ ಸಂಪನ್ಮೂಲ ಅಭಿವೃದ್ಧಿ ಆಧಾರಿತ ಅಧ್ಯಯನ

ಕ್ರಮ. ಸಂಖ್ಯೆ	ಸೂಚೀಕರಣ	ಪುಟ ಸಂಖ್ಯೆ
1	ಪೀಠಿಕೆ	1
2	ಅಧ್ಯಯನದ ಸ್ವರೂಪ	2
3	ಅಧ್ಯಯನದ ಉದ್ದೇಶ	5
4	ಅಧ್ಯಯನದ ವ್ಯಾಪ್ತಿ	6
5	ಅಧ್ಯಯನದ ಮಹತ್ವ	7
6	ಸಮಾರೋಪ	8
7	ಅಧ್ಯಯನದ ಫಲಿತಗಳು	9
8	ಸಂಶೋಧನಾ ಸಲಹೆಗಳು	21
9	ಮುಂದಿನ ಸಾಧ್ಯತೆಗಳು	22
	ಪರಾಮರ್ಶನ ಗ್ರಂಥಗಳು	23

ಪಂಜುರ್ಲಿ ದೈವದ ಪ್ರಾದಿನ್ಯತೆ, ಪ್ರದರ್ಶನಾತ್ಮಕತೆ: ಮಾನವ ಸಂಪನ್ಮೂಲ ಅಭಿವೃದ್ಧಿ ಆಧಾರಿತ ಅಧ್ಯಯನ

1. ಪೀಠಿಕೆ

ಕರ್ನಾಟಕದ ಪಶ್ಚಿಮ ಕರಾವಳಿಯ ಭಾಗವಾಗಿರುವ ತುಳುನಾಡು ಧಾರ್ಮಿಕವಾಗಿ ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ ತನ್ನದೇ ಆದ ವೈಶಿಷ್ಟತೆಯನ್ನು ಹೊಂದಿರುವ ಪ್ರದೇಶ. ಹಲವು ಭಿನ್ನ ಸಮುದಾಯಗಳು ಆಚರಣೆ, ಕಲೆ, ಸಂಪ್ರದಾಯ, ಆರಾಧನೆ ಮುಂತಾದವುಗಳಲ್ಲಿ ಇವತ್ತಿಗೂ ಕುತೂಹಲವನ್ನು ಗೌಪ್ಯತೆಯನ್ನು ಕಾಯ್ದುಕೊಂಡು ಬಂದಿದೆ. ಸಾಮಾನ್ಯ ಜನ ಸಮುದಾಯಗಳು ತಾವು ಇರುವ ನಿರ್ದಿಷ್ಟ ಪ್ರಾದೇಶಿಕ ಹಿನ್ನೆಲೆಯಲ್ಲಿ ತನ್ನ ಅನನ್ಯತೆಯನ್ನು ಅಭಿವ್ಯಕ್ತಿಸುವಾಗ ಹಲವಾರು ಸಮೂಹನ ಮಾಧ್ಯಮಗಳು ಮುಖ್ಯವಾಗುತ್ತವೆ. ಈ ಹಿನ್ನೆಲೆಯಲ್ಲಿ ತುಳುನಾಡಿನ ಭೂತಾರಾಧನೆ ಅಥವಾ ದೈವಾರಾಧನೆಯು ಮಹತ್ವದ ಸ್ಥಾನವನ್ನು ಪಡೆದುಕೊಳ್ಳುತ್ತದೆ. ತುಳುನಾಡು ದೈವಗಳ ಆರಾಧನೆಯ ಕೇಂದ್ರ ಎಂದು ಹೇಳಿದರೆ ತಪ್ಪಾಗಲಾರದು. ಲೌಕಿಕದಲ್ಲಿದ್ದ ವ್ಯಕ್ತಿಯು ಅಲೌಕಿಕ ಶಕ್ತಿಗಳನ್ನು ಪಡೆದು ಗಂಡು, ಹೆಣ್ಣು ಎಂಬ ಭೇದ ಭಾವವಿಲ್ಲದೆ ಭಾರತೀಯ ಪರಂಪರೆಯಲ್ಲಿನ ಚೌಕಟ್ಟನ್ನು ಉಳಿಸಿಕೊಂಡು ದೈವ ಆರಾಧನೆಗೆ ಮಹತ್ವದ ಸ್ಥಾನವನ್ನು ಕೊಟ್ಟಿವೆ.

ಈ ಆರಾಧನಾ ಸ್ವರೂಪದಲ್ಲಿ ಎರಡು ರೀತಿಯ ಆರಾಧನೆಗಳನ್ನು ಮನಗಾಣಿಸಿದ್ದಾರೆ. ಅದರಲ್ಲಿ ದೇವತಾರಾಧನೆ ಒಂದು ಅಂಶವಾದರೆ; ದೈವರಾಧನೆ ಎರಡನೆಯ ಅಂಶ. ಅಗ್ರಗಣ್ಯ ಸ್ಥಾನವನ್ನು ಇದು ಪಡೆದಿದೆ. ತುಳುನಾಡಿನ ಚರಿತ್ರೆಯಲ್ಲಿ ದೇವತಾರಾಧನೆಗಿಂತ ದೈವಾರಾಧನೆಗೆ ಹೆಚ್ಚು ಮಹತ್ವ ನೀಡಿದ್ದಾರೆ. ಈಗಲೂ ಈ ಸಂಪ್ರದಾಯವನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಜನರ ಅಥವಾ ಜನಪದ ಸಾಮಾನ್ಯ ಮಾತುಗಾರಿಕೆಯಲ್ಲಿಯೂ ಕೂಡ 'ದೈವ ದೇವರ ಅನುಗ್ರಹ ನಿನಗೆ ಇರಲಿ' ಎನ್ನುವ ಆಶೀರ್ವಾದದ ಮಾತಿನಲ್ಲಿಯೇ ಮೊದಲು ಬರುವುದು. ದೈವ ಆದ್ದರಿಂದ ಈ ಮಾತಿನಲ್ಲಿ ತುಳುನಾಡಿನ ಜನರಲ್ಲಿ ದೈವದ ಬಗ್ಗೆ ಇರುವಂತಹ ನಂಬಿಕೆ, ವಿಶ್ವಾಸ, ಭಯ, ಭಕ್ತಿ, ಶ್ರದ್ಧೆ, ಆಚಾರ, ಯಾವ ರೀತಿಯಲ್ಲಿ ಇದೆ ಎನ್ನುವುದು ತಿಳಿದು ಬರುತ್ತದೆ, ಮನುಷ ನೇರವಾಗಿ ಪ್ರಕೃತಿಯೊಂದಿಗೆ ಸಂಬಂಧವನ್ನು ಇಟ್ಟುಕೊಂಡಿರುವುದರಿಂದ ಪ್ರಕೃತಿಯನ್ನೇ ದೇವರೆಂದು ಭಾವಿಸಿರುವುದರಿಂದ ತಾನು ಜೀವನ ಮಾಡುವ ಸಂದರ್ಭದಲ್ಲಿ ಆಹಾರದ ಕಾರಣಕ್ಕಾಗಿ ಜನರು ಕೃಷಿಗೆ ತೊಂದರೆ ಕೊಡುವ ಪ್ರಾಣಿಗಳಿಗೆ ಮನಸೋತು ಭಕ್ತಿಯಿಂದ ಶರಣಾಗಿ ದೈವಿಕ ಸ್ವರೂಪಕ್ಕೆ ಸೇರಿಸಿ ಅದನ್ನು ನಂಬಿಕೊಂಡು ತಾನು ಬೆಳೆದಂತಹ ಬೆಳೆಗಳನ್ನು ಆ ಮೂಲಕ

ರಕ್ಷಣೆಯಲ್ಲಿ ತೊಡಗಿಸಿಕೊಂಡು ಬರುವ ಸಂದರ್ಭದಲ್ಲಿ ಜೀವಂತ ಪ್ರಾಣಿಗಳನ್ನೇ ದೈವ ಎಂದು ನಂಬಿ ಆರಾಧಿಸುವುದು ದೈವರಾಧನೆಗೆ ಸಾಕ್ಷಿಯಾಗಿದೆ. ಈಗಾಗಲೇ ವಿವಿಧ ನೆಲೆಗಳಲ್ಲಿ ದೈವಾರಾಧನೆಯನ್ನು ಕುರಿತಂತೆ ವ್ಯಾಖ್ಯಾನಿಸಿದ ವಿವರಗಳು ಬಂದಿವೆ. ಮನುಷ್ಯನ ಬದುಕಿಗೆ ಆಸರೆಯಾಗುವಂತಹ ದೈವಗಳನ್ನು ಪ್ರಾಣಿ ಸಂಬಂಧಿತ ದೈವಗಳು, ಮನುಷ್ಯ ಸಂಬಂಧಿದೈವಗಳು ಹಾಗೂ ದೇವಿ ಸ್ವರೂಪದ ದೈವಗಳೆಂದು ವಿಭಾಗಿಸಿ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಈ ಅಧ್ಯಯನದಲ್ಲಿ ತಮಗೆ ತೊಂದರೆ ಕೊಡುವಂತಹ ಪ್ರಾಣಿ ಅದರಲ್ಲೂ ಮುಖ್ಯವಾಗಿ ಹಂದಿಯನ್ನು ದೈವತ್ವಕ್ಕೆ ಏರಿಸಿ ಅದನ್ನು ಆರಾಧನೆ ಮಾಡಿ ತಾನು ಸಂತೃಪ್ತ ಜೀವನವನ್ನು ನಡೆಸಲು ಮಾನವ ತೊಡಗಿದ. ಈ ಹಿನ್ನೆಲೆಯಲ್ಲಿ ಪ್ರಾಣಿ ಸಂಬಂಧಿತ ದೈವಗಳು ತುಳುನಾಡಿನ ಮೂಲಗಳೆಂದು ತುಳುನಾಡಿನ ಜನರ ಹಾಗೂ ಜನಪದ ನಂಬಿಕೆ. ಆದ್ದರಿಂದ ಈ ವಿಚಾರವನ್ನು 'ಪಂಜುರ್ಲಿ ಪ್ರಾದಿನ್ಯತೆ, ಪ್ರದರ್ಶನಾತ್ಮಕತೆ: ಮಾನವ ಸಂಪನ್ಮೂಲ ಅಭಿವೃದ್ಧಿ ಆಧಾರಿತ ಅಧ್ಯಯನ' ಎಂಬ ಶೀರ್ಷಿಕೆಯಲ್ಲಿ ಪಂಜುರ್ಲಿ ದೈವದ ಆರಾಧನಾ ಅನನ್ಯತೆಯನ್ನು ಎತ್ತಿ ಹಿಡಿಯುತ್ತಾ ಅದರ ಸ್ವರೂಪವನ್ನು ವಿಶ್ಲೇಷಿಸುವಂತಹ ಪ್ರಕ್ರಿಯೆಯನ್ನು ನಡೆಸಲಾಗಿದೆ. ದೈವಾರಾಧನೆಯಿಂದ ಅಭಿವೃದ್ಧಿಯ ನೆಲೆ ಕಂಡು ಕೊಂಡ ಬಗೆಯನ್ನು ವಿಶೇಷವಾಗಿ ಅವಲೋಕಿಸುವುದನ್ನು ಮುಂದಿನ ಭಾಗದಲ್ಲಿ ಕಾಣಬಹುದಾಗಿದೆ.

2. ಅಧ್ಯಯನದ ಸ್ವರೂಪ

ಕನ್ನಡ ಸಂಶೋಧನಾ ಕ್ಷೇತ್ರವು ಹಲವು ಅಧ್ಯಯನ ಮಾದರಿಗಳ ಮೂಲಕ ಈವರೆಗೂ ನಡೆದುಕೊಂಡು ಬಂದಿದೆ. ಕನ್ನಡಕ್ಕೆ ಕನ್ನಡದ್ದೇ ಆದ ಸಂಶೋಧನಾ ಮಾದರಿಯನ್ನು ಹಲವು ಹಿರಿಯ ವಿದ್ವಾಂಸರು ರೂಪಿಸಿದ್ದಾರೆ. ಕನ್ನಡದ ಸಂಶೋಧನಾ ಮಾದರಿಯು ಈವರೆಗೆ ಅನುಸರಿಸಿಕೊಂಡು ಬಂದಿರುವ ಸಂಶೋಧನಾ ವಿಧಾನದ ಮೂಲಕ ಪ್ರಸ್ತುತ ಅಧ್ಯಯನವನ್ನು ಮಾಡಲಾಗಿದೆ. 'ಪಂಜುರ್ಲಿ ದೈವದ ಪ್ರಾದಿನ್ಯತೆ, ಪ್ರದರ್ಶನಾತ್ಮಕತೆ: ಮಾನವ ಸಂಪನ್ಮೂಲ ಅಭಿವೃದ್ಧಿ ಆಧಾರಿತ ಅಧ್ಯಯನ'ಎಂಬ ಈ ಅಧ್ಯಯನವು ಮೊದಲಿಗೆ ಪಂಜುರ್ಲಿ ದೈವದ ಕುರಿತು ಚರ್ಚಿಸುತ್ತದೆ. ಪಂಜುರ್ಲಿ ದೈವದ ಪ್ರಾಧಾನ್ಯತೆ ಏನು? ಎಂಬುದನ್ನು ಹಾಗೆಯೇ ಪಂಜುರ್ಲಿ ದೈವದ ಪ್ರದರ್ಶನ ಗೊಳ್ಳುವ ಬಗೆ ಹೇಗೆ? ಏನು? ಎಂಬುದನ್ನು ಪ್ರಸ್ತುತಪಡಿಸಿಕೊಂಡು ಅದರಿಂದ ಹೇಗೆ ಮಾನವ ಸಂಪನ್ಮೂಲ ಅಭಿವೃದ್ಧಿಯಾಗಿದೆ. ಎಂಬುದನ್ನು ಗುರುತಿಸುವ ಪ್ರಯತ್ನವನ್ನು ನಡೆಸಿದೆ. ಕ್ಷೇತ್ರ ಕಾರ್ಯದ ಮೂಲಕ ಪಡೆದ ಮಾಹಿತಿಯನ್ನು (ದತ್ತಾಂಶಗಳನ್ನು) ವಿಶ್ಲೇಷಣೆಗೆ

ಒಳಪಡಿಸಲಾಗಿದೆ. ಪ್ರಶ್ನಾವಳಿ ಒಂದು. ದೈವ ನರ್ತಕರಿಂದ ಪಡೆದ ದತ್ತಾಂಶಗಳು. ದೈವದ ಪ್ರೇಕ್ಷಕ ವರ್ಗದಿಂದ ಪಡೆದ ದತ್ತಾಂಶಗಳನ್ನು ಒಟ್ಟು ಮಾಡಿಕೊಂಡು ಅವುಗಳನ್ನು ವ್ಯವಸ್ಥಿತವಾಗಿ ವಿಂಗಡಿಸಲಾಗಿದೆ. ಕೊನೆಗೆ ಫಲಿತಗಳನ್ನು ವ್ಯಾಖ್ಯಾನ ರೂಪದಲ್ಲಿ ನೀಡಿದೆ. ಹೀಗೆ ಮಾಹಿತಿ, ವರ್ಗೀಕರಣ, ವಿಶ್ಲೇಷಣೆ ಮತ್ತು ವ್ಯಾಖ್ಯಾನ ಎಂಬ ವಿವಿಧ ಹಂತಗಳನ್ನು ಅನುಸರಿಸುವ ಮೂಲಕ ಈ ಅಧ್ಯಯನವನ್ನು ಕಟ್ಟಿಕೊಡಲಾಗಿದೆ.

ತುಳುನಾಡಿನ ಪಂಜುರ್ಲಿ ದೈವದ ಪ್ರಾಧಾನ್ಯತೆ, ಪ್ರದರ್ಶನಾತ್ಮಕತೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಆಧಾರಿತ ಅಧ್ಯಯನ ಇಡೀ ತುಳುನಾಡಿನಲ್ಲಿ ವಿವಿಧ ಭಾಗಗಳಲ್ಲಿ ನಡೆಯುವಂತಹ ಪಂಜುರ್ಲಿ ದೈವಗಳ ಆರಾಧನೆ, ನಂಬಿಕೆ, ಸಂಪ್ರದಾಯ, ಕಟ್ಟುಪಾಡು ಆರಾಧನಾ ಸಂರಚನೆಗಳನ್ನು ಪರಿಶೀಲಿಸಲಾಗಿದೆ. ದೈವ ನೆಲ ನಿಂತ ಕಥೆ, ಛಾಯಾಚಿತ್ರಗಳು, ದೈವ ನರ್ತಕರ ನುಡಿ, ಇತ್ಯಾದಿಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಈ ಮೂಲಕ ಈವರೆಗೆ ಪಂಜುರ್ಲಿ ದೈವದ ಕುರಿತಂತೆ ವ್ಯಾಪಕವಾದ ಈ ಮಾದರಿಯ ಅಧ್ಯಯನಗಳು ನಡೆಯದೆ ಇರುವುದಕ್ಕೋಸ್ಕರ ಇವುಗಳ ಪ್ರತಿಯೊಂದು ಕವಲುಗಳನ್ನು ಸೀಳು ನೋಟಗಳನ್ನು ಅನ್ವೇಷಣೆ ಮಾಡಲಾಗಿದೆ. ಪಂಜುರ್ಲಿ ದೈವದ ಕುರಿತಂತೆ ಶಾಸನಗಳಲ್ಲಿ ಉಲ್ಲೇಖಗಳನ್ನು ಹೆಸರಿಸಲಾಗಿದೆ. ಇನ್ನಿತರ ಯಾವುದೇ ಲೇಖನ, ಗ್ರಂಥ, ಕೃತಿ ಮತ್ತು ಯಾವುದೇ ರೀತಿಯ ಬರವಣಿಗೆಗಳನ್ನು ಅವುಗಳನ್ನು ದಾಖಲಿಸಲಾಗಿದೆ. ಅವುಗಳಲ್ಲಿ ಅನುಬಂಧದಲ್ಲಿ ಸೇರಿಸಿಕೊಳ್ಳಲಾಗಿದೆ. ಪರಿಶೋಧನೆಯ ಹಿನ್ನೆಲೆಯಲ್ಲಿ ದೈವವು ನೆಲೆ ನೆಲೆ ನಿಂತ ಸ್ಥಳಗಳನ್ನು ಶೋಧಿಸುವುದೇ ಅಧ್ಯಯನದ ಸ್ವರೂಪವಾಗಿದೆ.

ಅಧ್ಯಾಯ ಒಂದು ಪೀಠಿಕೆಯಲ್ಲಿ ಪ್ರಸ್ತಾವನೆಯಲ್ಲಿ ತುಳುನಾಡಿನ ಪಂಜುರ್ಲಿ ದೈವದ ಬಗ್ಗೆ ವಿವರಿಸಲಾಗಿದೆ. ಅಧ್ಯಯನದ ಸ್ವರೂಪ, ಅಧ್ಯಯನದ ಉದ್ದೇಶ, ಅಧ್ಯಯನದ ವಿಧಾನ, ಅಧ್ಯಯನದ ಮಹತ್ವ, ತುಳುನಾಡಿನ ಇತಿಹಾಸ, ದಕ್ಷಿಣ ಕನ್ನಡ ಜಿಲ್ಲೆಯ ಸಾಮಾಜಿಕ ಜೀವನ, ದಕ್ಷಿಣ ಕನ್ನಡ ಜಿಲ್ಲೆಯ ಸಾಂಸ್ಕೃತಿಕ ಆಚರಣೆ. ಸಮಕಾಲಿನ ಸ್ಥಿತಿಯಲ್ಲಿ ದೈವಾರಾಧನೆಯನ್ನಾಗಿ ವಿಭಾಗಿಸಿಕೊಂಡು ಚರ್ಚಿಸಲಾಗಿದೆ. ಪ್ರಸ್ತುತ ಅಧ್ಯಯನದ ಉದ್ದೇಶ ವ್ಯಾಪ್ತಿ ಸ್ವರೂಪ ಮತ್ತು ಅಧ್ಯಯನಕ್ಕೆ ಬಳಸಿರುವ ವಿಧಾನಗಳನ್ನು ಕುರಿತು ವಿವರಿಸಿಕೊಳ್ಳಲಾಗಿದೆ. ಹಾಗೂ ಪ್ರಸ್ತುತ ಅಧ್ಯಯನದ ಉದ್ದೇಶವನ್ನು ಸಾದರಪಡಿಸಲಾಗಿದೆ. ಬಹು ಮುಖ್ಯವಾಗಿ ಈ ಪ್ರಾರಂಭದ ವ್ಯಾಪ್ತಿಯ ನಿರ್ದಿಷ್ಟತೆ, ಖಚಿತತೆ ಯನ್ನು ಹಾಗೂ ಪರಿಮಿತಿಗಳನ್ನು ಅಧ್ಯಯನದ ದೃಷ್ಟಿಗಾಗಿ ಗುರುತಿಸಿಕೊಳ್ಳಲಾಗಿದೆ. ಪ್ರಬಂಧದ ರಚನೆಯಲ್ಲಿ ದೊರೆತಿರುವ ಅಂಶಗಳನ್ನು ವ್ಯವಸ್ಥಿತವಾಗಿ ವಿಂಗಡಿಸಿಕೊಂಡು ಚರ್ಚೆಗಳನ್ನು ಆರಂಭಿಸಲು, ಸಂವಾದಗಳನ್ನು ನಡೆಸಲು ಅಗತ್ಯವಾದ

ಸಂಶೋಧನಾ ಮಾದರಿಗಳನ್ನು ಕ್ಷೇತ್ರಕಾರ್ಯ ಪ್ರದರ್ಶನ ಮತ್ತು ಅವಲೋಕನ ವಿಧಾನಗಳಲ್ಲಿ ಬಳಸಿಕೊಳ್ಳಲಾಗಿದೆ. ಮಾಹಿತಿದಾರರು ನೀಡಿರುವ ಮಾಹಿತಿಗಳನ್ನು ಬಳಸಿ ದತ್ತಾಂಶಗಳ ದತ್ತಾಂಶಗಳ ವಿಶ್ಲೇಷಣೆ ನಡೆಸಲಾಗಿದೆ. ಅಲ್ಲಲ್ಲಿ ನಕ್ಷೆಗಳನ್ನು ಅಂಕಿ ಅಂಶಗಳನ್ನು ನೀಡಲಾಗಿದೆ.

ಅಧ್ಯಾಯ ಎರಡರಲ್ಲಿ ಸಾಹಿತ್ಯ ಸಮೀಕ್ಷೆಯನ್ನಾಗಿ ಮಾಡಿಕೊಳ್ಳಲಾಗಿದ್ದು, ಇದರಲ್ಲಿ ವಿವಿಧ ವಿದ್ವಾಂಸರು ಬರೆದ ಗ್ರಂಥಗಳನ್ನು ಅಧ್ಯಯನ ಮಾಡಿ, ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗುವಂತೆ ಬಳಸಿಕೊಳ್ಳಲಾಗಿದೆ.

ಅಧ್ಯಾಯ ಮೂರರಲ್ಲಿ ಸಂಶೋಧನಾ ವಿಧಾನವೆಂದು ಮಾಡಿಕೊಳ್ಳಲಾಗಿದ್ದು, ಅದರಲ್ಲಿ ಪ್ರಸ್ತುತ ಸಂಶೋಧನೆಯ ಧ್ಯೇಯೋದ್ದೇಶಗಳು, ಸಂಶೋಧನ ವಿನ್ಯಾಸ, ಮಾಹಿತಿ ಸಂಗ್ರಹಣೆಯ ವಿಧಾನದ ಬಗ್ಗೆ ಸವಿವರವಾಗಿ ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ 'ಪಂಜುರ್ಲಿ ದೈವ: ತುಳುನಾಡಿನ ದೈವಾರಾಧನೆ' ಪಂಜರ್ಲಿ ದೈವದ ವರ್ಗೀಕರಣ ಪ್ರಧಾನವಾಗಿ ತುಳುನಾಡಿನಲ್ಲಿ ಇಂತಿಷ್ಟೇ ದೈವಗಳು ಎಂದು ಹೇಳಲು ಎಷ್ಟು ಕಷ್ಟ ಸಾಧ್ಯವೋ ಅಂತೆಯೇ ಪಂಜುರ್ಲಿ ದೈವವನ್ನು ವರ್ಣಿಸುವುದು. ಈಗಾಗಲೇ ಪ್ರಧಾನ ಪ್ರಾಣಿ ಸಂಬಂಧ ಪಂಜುರ್ಲಿಯ ಕುರಿತಾಗಿ ಕೆಲವೊಂದು ವರ್ಗೀಕರಣ ಮಾಡಿ ವಿದ್ವಾಂಸರುಗಳು ಸಂಶೋಧಕರು ದಾಖಲಿಸಿದ್ದಾರೆ. ಅದರಲ್ಲೂ ಪಂಜುರ್ಲಿ ದೈವದಲ್ಲಿ ಪ್ರಧಾನವಾಗಿ ಕೆಲವು ದೈವಗಳನ್ನು ಹೆಸರಿಸಿದ್ದಾರೆ. ಅಪ್ಪಣ್ಣ ಪಂಜರ್ಲಿ, ಕುಪ್ಪೆಟ್ಟು ಪಂಜರ್ಲಿ ಮತ್ತು ವರುಣರ ಪಂಜುರ್ಲಿ ಹೀಗೆ ಕೆಲವೊಂದು ಹೆಸರುಗಳನ್ನು ಮಾತ್ರ ಉಲ್ಲೇಖಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇತ್ತೀಚಿನವರೆಗೆ ಪಂಜುರ್ಲಿ ದೈವವನ್ನು ವರ್ಗೀಕರಣ ಮಾಡಿ ವಿವಿಧ ಸ್ಥಳಗಳಲ್ಲಿ ವಿವಿಧ ಸ್ವರೂಪ ಮತ್ತು ಆರಾಧನೆಗಳಲ್ಲಿ ಭಿನ್ನತೆ ಮತ್ತು ದೈವದ ಹೆಸರಿನ ಜೊತೆಗೆ ಸ್ಥಳ ನಾಮಾಂಕಿತಗೊಂಡಿರುವುದು ಎಂದು ಪಂಜುರ್ಲಿ ದೈವದ ವರ್ಗೀಕರಣ ಎನ್ನುವ ಈ ಅಧ್ಯಾಯದಲ್ಲಿ ಪರಿಕಲ್ಪಿಸಿಕೊಳ್ಳಲಾಗಿದೆ. ಪ್ರಾಥಮಿಕ ಮಾಹಿತಿ ಪ್ರಕಾರ ಮಾಡುವಾಗ 116 ಕ್ಕಿಂತ ಹೆಚ್ಚು ದೈವಗಳ ಉಲ್ಲೇಖಗಳು ಸಿಗುತ್ತವೆ.

ಈ ಉಲ್ಲೇಖಗಳು ಅರಸತ್ತಿಗೆ ರಾಜ್ಯ ಮಾಗಣೆ ಬೀಡು ಸೀಮೆ ಗ್ರಾಮ ಗೊತ್ತು ಬರ್ಕೆ ಕುಟುಂಬ ಹೀಗೆ ಈ ಎಲ್ಲಾ ಸ್ಥಳಗಳಲ್ಲಿ ಪಂಜುರ್ಲಿ ದೈವದ ವರ್ಗೀಕರಣ ಎಂಬ ಪರಿಕಲ್ಪನೆ ಅಡಿಯಲ್ಲಿ ದೈವವನ್ನು ವರ್ಗೀಕರಿಸಿಕೊಳ್ಳಲಾಗಿದೆ ಅದರ ವಿವರಗಳನ್ನು ನೋಡಬಹುದು. ಅವತರಿಸಿದ ಪ್ರಮುಖ ನೆಲೆಗಳು ತುಳುನಾಡಿನ ಪ್ರಾಣಿ ಸಂಬಂಧಿ ದೈವಗಳಲ್ಲಿ ಪಂಜುರ್ಲಿ ದೈವವೋ ಪ್ರಧಾನವಾಗಿ ಕಾಣಿಸಿಕೊಳ್ಳುವ ಮತ್ತು ಆರಾಧನೆಗೊಳ್ಳುವ ದೈವ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಅಧ್ಯಾಯ ಐದರಲ್ಲಿ ಪಂಜುರ್ಲಿ ದೈವದ ವರ್ಗೀಕರಣ ವನ್ನು ವಿವಿಧ ಹೆಸರುಗಳಿಂದ

ಉಲ್ಲೇಖಿತಗೊಂಡು ಆರಾಧನೆಗೊಳ್ಳುವಂತಹ ಸ್ಥಳಗಳನ್ನು ವಿವೇಚಿಸಲಾಗುವುದು ಈ ಅಧ್ಯಾಯದಲ್ಲಿ ತುಳುನಾಡಿನಲ್ಲಿ ದೈವ ಅವತರಿಸಿದ ಪ್ರಮುಖ ನೆಲೆಗಳನ್ನು ಗುರುತಿಸಿ ದಾಖಲಿಸಲಾಗುತ್ತದೆ. ಈ ಪ್ರಮುಖ ನೆಲೆಗಳು ಪೌರಾಣಿಕ ಹಿನ್ನೆಲೆ ಚಾರಿತ್ರಿಕತೆಯಿಂದ ಮತ್ತು ಮಹತ್ವಪೂರ್ಣ ನೆಲೆಯಾಗಿರುವುದರಿಂದ ಇವುಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಿ ವಿಶ್ಲೇಷಣೆಗೆ ಒಳಗು ಮಾಡಲಾಗಿದೆ. ಈ ಕೆಳಗೆ ಉಲ್ಲೇಖಿಸಿದ 16 ಪ್ರಮುಖ ದೈವ ನೆಲೆಗಳು ವಿವಿಧ ಕಾರಣಗಳಿಗಾಗಿ ಮಹತ್ವವನ್ನು ಪಡೆದಿವೆ. ಪ್ರತಿಯೊಂದು ದೈವ ನೆಲೆಯಾದ ಸ್ಥಳದ ಹಿಂದೆ ಅದರ ಹಿಂದಿರುವ ಐತಿಹ್ಯಗಳನ್ನೂ ಕಾರಣಗಳನ್ನು ನಂಬಿಕೆಗಳನ್ನು ನಡಾವಳಿಕೆಗಳನ್ನು ವಿಸ್ತೃತವಾಗಿ ದಾಖಲಿಸಲಾಗಿದೆ ಪ್ರಮುಖ ನೆಲೆಗಳಲ್ಲಿ ಪಾರಂಕಿ ಮೂಲ, ನೆರಂಕಿ, ಬಡ ಕಟ್ಟೆ, ಕಾಡು ಬೆಟ್ಟು, ಅಂಬಾಡಾಡಿ, ಕುಪ್ಪೆಟ್ಟು, ಐಂದ್ಲೆಪಟ್ಟ, ಕುಕ್ಕಾಳಬೀಡು, ನಿಲ್ಯಾಡಿಬೀಡು, ಕಾಯಮಾರಗುತ್ತು, ತುಂಬಿದಗುತ್ತು, ಉಮ್ಮಣ್ಣ ಬಲ್ಲಾಳಗೊತ್ತು, ಕಾವತಾರ ನಂದಳಿಕೆ, ಮೂಡಾಯಿ ಕುಡುಮ, ಇತ್ಯಾದಿ ಸ್ಥಳಗಳಲ್ಲಿ ಜೈನ ಸಮುದಾಯದ ಹಾಗೂ ಮೂಲ ಸಮುದಾಯದ ಪ್ರತಿನಿಧಿಕರಣವನ್ನು ಕಾಣಬಹುದಾಗಿದೆ. ಈ ವಿಚಾರಗಳನ್ನು ಈ ಅಧ್ಯಾಯದಲ್ಲಿ ಜನಾಂಗ ಹಿನ್ನೆಲೆಯೊಂದಿಗೆ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ಐದರಲ್ಲಿ ಮಾಹಿತಿಧಾರರಿಂದ ಪಡೆದು ಕೊಂಡಂತಹ ಮಾಹಿತಿಯನ್ನು ಕೋಷ್ಟಕದಲ್ಲಿ ಹಾಕಿ ದತ್ತಾಂಶಗಳ ವಿಶ್ಲೇಷಣೆಯನ್ನು ಮಾಡಲಾಗಿದೆ.

ಅಧ್ಯಾಯ ಆರರಲ್ಲಿ ದತ್ತಾಂಶಗಳ ವಿಶ್ಲೇಷಣೆಯಲ್ಲಿ ಕಂಡುಕೊಂಡಂತಹ ಫಲಿತಗಳನ್ನು, ಸಂಶೋಧನಾ ಸಲಹೆಗಳು ಮತ್ತು ಮುಂದಿನ ಅಧ್ಯಯನದ ಸಾಧ್ಯತೆಗಳನ್ನು ವಿವರಿಸಲಾಗಿದೆ. ಕೊನೆಯ ಭಾಗದ ಅನುಬಂಧದಲ್ಲಿ ಪರಾಮರ್ಶನ ಗ್ರಂಥಗಳು, ಲೇಖನಗಳು, ಛಾಯಾಚಿತ್ರಗಳು ಹಾಗೂ ನಕ್ಷೆಯನ್ನು ನೀಡಲಾಗಿದೆ.

3. ಅಧ್ಯಯನದ ಉದ್ದೇಶ

ತುಳುನಾಡಿನ ದೈವರಾಧನೆಯ ಪರಿಕಲ್ಪನೆಯಲ್ಲಿ ಇವರಿಗೆ ಸಾಕಷ್ಟು ಅಧ್ಯಯನಗಳು ಸಂಶೋಧನೆಗಳು ನಡೆದಿದೆ ಮತ್ತು ನಡೆಯುತ್ತಾ ಇವೆ. ವಿದ್ವಾಂಸರು, ಸಂಶೋಧಕರು, ಪಂಡಿತರು ದೈವ ನೆಲೆಯಲ್ಲಿನ ಅನುಭವಿಗಳು ದೈವ ನರ್ತಕರು ವಿಭಿನ್ನ ನೆಲೆಯಲ್ಲಿ ದೈವರಾಧನೆಯನ್ನು ವ್ಯಾಖ್ಯಾನಿಸುತ್ತಾ ಬಂದಿದ್ದಾರೆ. ಅದೇ ರೀತಿ ತಮ್ಮ ಅನುಭವಗಳನ್ನು ಕೃತಿಗಳ ಮೂಲಕ ಲೇಖನಗಳ ಮೂಲಕ ಸಮಾಜಕ್ಕೆ ಧಾರೆಯೆರೆದಿದ್ದಾರೆ. ಕೆಲವೊಂದು ಅಧ್ಯಯನಗಳು ಏಕದೈವದ ಕುರಿತಂತೆ ಅಧ್ಯಯನ ನಡೆದರೆ; ಇನ್ನು ಕೆಲವು ಅಧ್ಯಯನಗಳು ವಿಶಾಲ ವ್ಯಾಪ್ತಿಯ ನೆಲೆಯಲ್ಲಿ ಹಲವು

ದೈವಗಳ ವಿವರಣೆಗಳೊಂದಿಗೆ ನಡೆದಿದೆ. ದೈವರಾಧನೆಯ ಸಾಂಸ್ಕೃತಿಕ ಚಹರೆಗಳನ್ನು ಅಧ್ಯಯನ ಮಾಡಿದಾಗ ನನ್ನನ್ನು ಕಾಡಿದ ಪ್ರಶ್ನೆ ಎಂದರೆ ಭಾರತೀಯ ಪರಂಪರೆಯಲ್ಲಿನ ಇಡೀ ತುಳುನಾಡಿನ ಮೂಲದೇವ ಎಂದು ಪರಿಗಣಿಸಲ್ಪಡುವ ಪ್ರಾಣಿ ಸಂಬಂಧಿ ದೈವದ ಅಭಿವೃದ್ಧಿಯಾಧಾರಿತ ಅಧ್ಯಯನ ಕುರಿತಾಗಿ ಅಷ್ಟಾಗಿ ಅಧ್ಯಯನಗಳು ಏಕೆ ಆಗಿಲ್ಲ? ಎಂಬುದು ತುಳುನಾಡಿನ ಪ್ರಾಣಿ ಸಂಬಂಧಿ ದೈವಗಳ ಕುರಿತಂತೆ ಚಿಕ್ಕಪುಟ್ಟ ಬಿಡಿ ಲೇಖನಗಳು, ಗ್ರಂಥಗಳು ದೈವರಾಧನೆಯ ಬಗೆಗಿನ ಅನುಭವದ ಕೃತಿಗಳು ಪಾಠಗಳು ಸಂಗ್ರಹಗೊಂಡಿವೆಯೇ ಹೊರತು ತುಳುನಾಡಿನ ವಿಸ್ತೃತವಾದ ಹಾಗೂ ತಲಸ್ಪರ್ಶಿಯಾದ ಅಧ್ಯಯನ ನಡೆಯದೇ ಇರುವುದರಿಂದ ಮತ್ತು ಪ್ರಾಣಿ ಸಂಬಂಧಿ ದೈವಗಳಲ್ಲಿ ಅತಿ ಹೆಚ್ಚು ನಾಮಾಂಕಿತ ಧಾರಣೆಗಳನ್ನು ಇಟ್ಟುಕೊಂಡು ವಿವಿಧ ನೆಲೆಗಳಲ್ಲಿ ಆರಾಧನೆಗೊಳ್ಳುತ್ತಿರುವಂತಹ ತುಳುವರ ಅತಿ ಭಕ್ತಿಯ ದೈವವಾದ ಪಂಜುರ್ಲಿಯ ಬಗ್ಗೆ ಅಧ್ಯಯನ ಮಾಡುವುದೇ ಮುಖ್ಯ ಉದ್ದೇಶವಾಗಿದೆ. ಅಲ್ಲದೆ ಈ ದೈವಾರಾಧನೆಯ ಸಂದರ್ಭದಲ್ಲಿ ದೈವನರ್ತಕರ ಜೀವನದ ಅಭಿವೃದ್ಧಿಯ ಕುರಿತಾದ ಆಲೋಚನೆಯೂ ಈ ಸಂದರ್ಭದಲ್ಲಿ ಇದೆ. ಈ ಹಿನ್ನೆಲೆಯಲ್ಲಿ ಪಂಬದ, ಪರವ, ನಳಿಕೆ, ಪಾಣಾರ ಮುಂತಾದ ಸಮುದಾಯಗಳ ಜೊತೆಗೆ ಸಂವಾದ ನಡೆಸಿ ಪ್ರಶ್ನೋತ್ತರ ರೀತಿಯಲ್ಲಿ ಅರ್ಥೈಸಿಕೊಳ್ಳುವ ವಿಧಾನಗಳಿಂದಾಗಿ ಈ ಅಧ್ಯಯನದಲ್ಲಿ ತೊಡಗುವ ಉದ್ದೇಶವನ್ನು ಇರಿಸಿಕೊಳ್ಳಲಾಗಿದೆ.

4. ಅಧ್ಯಯನದ ವ್ಯಾಪ್ತಿ

ತುಳುನಾಡಿನ ದೈವಾರಾಧನೆಯಲ್ಲಿ 'ಪಂಜುರ್ಲಿ ದೈವದ ಪ್ರಾದಿನ್ಯತೆ, ಪ್ರದರ್ಶನಾತ್ಮಕತೆ: ಮಾನವ ಸಂಪನ್ಮೂಲ ಅಭಿವೃದ್ಧಿ ಆಧಾರಿತ ಅಧ್ಯಯನ' ಈ ವಿಷಯದ ಕುರಿತಂತೆ ಆರಂಭದಲ್ಲಿ ತುಳುನಾಡಿನಲ್ಲಿ ಆರಾಧಿಸಲ್ಪಡುವಂತಹ ಆರಾಧನೆಗೊಳ್ಳುವಂತಹ ಪ್ರಾಣಿ ಸಂಬಂಧಿ ದೈವಗಳ ಕುರಿತಂತೆ ಪ್ರಾತಿನಿಧಿಕವಾಗಿ ಕೆಲವನ್ನು ವಿವೇಚಿಸಲಾಗಿದೆ. ವಿಶಾಲವಾದ ತುಳುನಾಡಿನಲ್ಲಿ ದೈವಾರಾಧನೆ ಬಗೆಗಿನ ಸಾಂಸ್ಕೃತಿಕ ಅನನ್ಯತೆಯನ್ನು ಸಾರುವ ಅಂತಹ ಪಂಜುರ್ಲಿ ದೈವದ ಕುರಿತಂತೆ ಅಧ್ಯಯನವನ್ನು ನಡೆಸಲಾಗಿದೆ. ಈ ಅಧ್ಯಯನಕ್ಕೆ ಈಗಾಗಲೇ ಭೌಗೋಳಿಕವಾಗಿ ತುಳುನಾಡು ಪ್ರದೇಶವೆಂದು ಕರೆಸಿಕೊಳ್ಳುವ ಪ್ರದೇಶಗಳನ್ನು ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ಗುರುತಿಸಲಾಗಿದೆ. ಮತ್ತು ಈ ಸಂಬಂಧ ಒಂದು ನಕ್ಷೆಯನ್ನು ನೀಡಲಾಗಿದೆ.

ಪಂಜುರ್ಲಿ ದೈವದ ಪ್ರಸಾರವನ್ನು ಕುರಿತಂತೆ ಸೂಚಿಸಲಾಗಿದೆ. ಇದು ನನ್ನ ಈ ಪ್ರಬಂಧದ ಅಧ್ಯಯನದ ವ್ಯಾಪ್ತಿಯು ಆಗಿದೆ. ನೂರಕ್ಕೂ ಅಧಿಕ ಪಂಜುರ್ಲಿಯ ಹೆಸರುಗಳು ಪ್ರಸ್ತಾಪಗೊಂಡಿವೆ.

ಅವೆಲ್ಲವೂ ಕೂಡ ಆಯಾ ಊರಿನ ಜೊತೆ ತಳಕು ಹಾಕಿಕೊಂಡು ಬಂದಿರುವವೇ ಹೊರತು ಬೇರೆ ಏನು ವಿಶೇಷವಾದಂತಹ ಅರ್ಥವಿಲ್ಲ. ಆದರೆ ಪಂಜುರ್ಲಿ ಎನ್ನುವ ಆ ದೈವವು ನೆಲೆಗೊಂಡಿರುವ ಮೂಲ ಸ್ಥಳಗಳೇ ಮುಖ್ಯವಾದಂತಹ ಅವುಗಳನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗುವುದು. ತುಳುನಾಡಿನಲ್ಲಿ ದೈವ ನರ್ತನವನ್ನು ಪರವರು, ಪಂಬದರು, ನಲಿಕೆ, ಪಾಣಾರ ಸಮುದಾಯದವರು ಮಾಡುತ್ತಾರೆ. ಅದರಲ್ಲಿ ಪರವರು ಪಿಳಿಚಂಡಿ ದೈವ, ರಾಜನ್ ದೈವವನ್ನು ಪಂಬದರು ಕಟ್ಟಿದರೇ, ಗುಳಿಗ, ಮಾಳವ ಸಮುದಾಯದವರು ವಿಷ್ಣುಮೂರ್ತಿ, ರಾಜನ್ ಗುಳಿಗ, ಮುತ್ತಪ್ಪನ್ ಇತ್ಯಾದಿ, ನಲಿಕೆ ಸಮುದಾಯದವರು ಪಂಜುರ್ಲಿ, ಕೊರಗಜ್ಜ, ಕಲ್ಲುರ್ಟಿ, ಮಂತ್ರದೇವತೆ ಮುಂತಾದವುಗಳ ಬಗ್ಗೆ ನರ್ತನವನ್ನು ಮಾಡುತ್ತಾರೆ. ಅದರಲ್ಲಿ ನಲಿಕೆ ಸಮುದಾಯದವರು ಪಂಜುರ್ಲಿಯನ್ನು ಕುರಿತು ನರ್ತನ ಮಾಡುವುದರಿಂದ ಪ್ರಸ್ತುತ ಅಧ್ಯಯನವು ನಲಿಕೆ ಸಮುದಾಯದವರನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ. ತುಳುನಾಡಿನ ವ್ಯಾಪ್ತಿ ಹೆಚ್ಚಾದ್ದರಿಂದಾಗಿ ಈ ಅಧ್ಯಯನವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ನಲಿಕೆ ಸಮುದಾಯದವರ ಮಾನವಾಭಿವೃದ್ಧಿಯ ಬಗ್ಗೆ ಬೆಳಕನ್ನು ಚೆಲ್ಲುತ್ತದೆ.

5. ಅಧ್ಯಯನದ ಮಹತ್ವ

ಕನ್ನಡ ನಾಡಿನ ಪ್ರಾದೇಶಿಕ ವೈವಿಧ್ಯಗಳಿರುವ ಭೌಗೋಳಿಕ ಕೇಂದ್ರವಾಗಿ ತುಳುನಾಡನ್ನು ಪರಿಗಣಿಸಬಹುದು. ಭಾಷೆ, ಸಂಸ್ಕೃತಿ, ನಡಾವಳಿ, ಭೌಗೋಳಿಕತೆ, ಆಚಾರ, ವಿಚಾರ, ಎಲ್ಲದರಲ್ಲಿಯೂ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಕನ್ನಡ, ತುಳು, ಕೊಂಕಣಿ ಉರ್ದು, ಹಿಂದಿ, ಬ್ಯಾರಿ, ಮಲಯಾಳಿ ಹೀಗೆ ಹಲವಾರು ಭಾಷೆಗಳನ್ನಾಡುವ ಜನ ಇಲ್ಲಿ ನೆಲೆ ನಿಂತಿದ್ದಾರೆ. ಅವರವರ ಜೀವನ ಕ್ರಮ ಆಚರಣೆಗಳು, ಆಚಾರ, ವಿಚಾರಗಳು, ನಡೆ ನಡವಳಿಕೆಗಳು, ಭಿನ್ನ ಭಿನ್ನವಾಗಿದೆ. ಆದರೂ ಇವರನ್ನೆಲ್ಲ ತುಳುವರು ಎಂಬ ನೆಲೆಯಲ್ಲಿ ಒಂದಾಗಿ ಜೀವಿಸುತ್ತಾ ಬಂದಿದ್ದಾರೆ. ಕರಾವಳಿ ತುಳುನಾಡಿನ ವೈಶಿಷ್ಟ್ಯವೆಂದರೇ ಅಲ್ಲಿನ ಯಕ್ಷಗಾನ, ಕಂಬಳಗಳ ಜೊತೆ ಜೀವನ ಕ್ರಮಗಳ ನಡುನಡುವೆ ನಡಾವಳಿ ಆಗಿ ಸೇರಿಕೊಂಡಿರುವುದು ಭೂತಾರಾಧನೆ. ಈ ನೆಲದ ನ್ಯಾಯ ದೇವತೆಗಳಾಗಿ ನ್ಯಾಯ ತೀರ್ಮಾನ ಕೊಡುತ್ತಾ ನಿರಂತರವಾಗಿ ಭೂತಾರಾಧನೆ ಎಂಬುದು ತುಳುವರ ಬದುಕಿನಲ್ಲಿ ಹಾಸು ಹೊಕ್ಕಾಗಿ ಮೂಡಿಬಂದಿದೆ. ಭೂತಾರಾಧನೆಯ ದೈವಗಳು ಹತ್ತು ಹಲವಾರು ಅವುಗಳ ಆಚರಣೆಯು ಭಿನ್ನ-ಭಿನ್ನ ಅದೇ ರೀತಿ ಭೌಗೋಳಿಕ ಪ್ರದೇಶಗಳಿಗೆ ಅನುಗುಣವಾಗಿ ಹೆಸರು ಕೂಡ ಭಿನ್ನ-ಭಿನ್ನವಾಗಿ ಬಳಕೆಯಾಗಿರುವುದನ್ನು ಕಾಣಬಹುದು.

ಒಂದೇ ಭೂತ ಬೇರೆ ಬೇರೆ ಸ್ಥಳ ಮತ್ತು ಜಾತಿಗೆ ಸಂಬಂಧಿಸಿದ ಆಚರಣೆಯಲ್ಲೂ ವೈವಿಧ್ಯತೆಯನ್ನು ಹೊಂದಿರುವುದನ್ನು ಕಾಣಬಹುದಾಗಿದೆ. ಪ್ರಸ್ತುತ ಈ ಭಾಗದಲ್ಲಿ ಪಂಜುರ್ಲಿ ಭೂತಕ್ಕೆ ಸಂಬಂಧಪಟ್ಟಂತೆ ಈ ಬಗೆಯ ವೈವಿಧ್ಯಗಳ ಹಿನ್ನೆಲೆಯನ್ನು ಆಯಾ ಆಯಾಯ ಸ್ಥಳ ಮತ್ತು ಜಾತಿ ಸಂಬಂಧಿತವಾಗಿ ನೋಡುವ ಉದ್ದೇಶವಿದೆ. ಈ ಭಾಗದಲ್ಲಿ ವೈವಿಧ್ಯತೆಗೆ ಕಾರಣವಾಗುವ ಅಂಶಗಳು ಸ್ಥಳ ವೈಶಿಷ್ಟ್ಯ ಕಾರಣಿಕದ ವ್ಯತ್ಯಾಸಗಳು ಹಾಗೂ ಆರಾಧನೆಯ ಕ್ರಮ, ಅವಧಿ, ಕಾಲ ಇನ್ನಿತರ ಪ್ರಮಾಣಗಳು ಹಿನ್ನೆಲೆಯಲ್ಲಿ ವೇಷ ವರ್ಣಿಕೆಯ ಪ್ರವಾಹ ಪ್ರವಾಹದ ಶಕ್ತಿ ಸಾಮರ್ಥ್ಯ ಇರುವ ನೆಲೆಯಲ್ಲಿ ಪಂಜುರ್ಲಿ ಭೂತ ಸಂಬಂಧಿತವಾದ ಅಧ್ಯಯನವನ್ನು ಇಲ್ಲಿ ನಡೆಸಲಾಗಿದೆ. ಕೇವಲ ಈ ತನಕ ಬಂದ ಪಂಜುರ್ಲಿ ಭೂತದ ಸಂಶೋಧನೆ ಲೇಖನಗಳ ಚರ್ಚೆ ವಿವರಗಳನ್ನು ಅಷ್ಟೇ ಅಲ್ಲದೆ ಕರಾವಳಿ ಭಾಗದ ಬೆಳ್ತಂಗಡಿ ತಾಲ್ಲೂಕು, ಮೂಡಬಿದ್ರೆ ತಾಲ್ಲೂಕು, ಉಪ್ಪಿನಂಗಡಿ ತಾಲ್ಲೂಕುಗಳ ವಿವಿಧ ಕಡೆಗಳಲ್ಲಿ ನಡೆಯುವ ಪಂಜುರ್ಲಿ ಭೂತ ಕೋಲಗಳಿಗೆ ಸಾಂದರ್ಭಿಕವಾಗಿ ಭೇಟಿಯನ್ನು ನಡೆಸಿ ಅಗತ್ಯ ಮಾಹಿತಿಯನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಅಲ್ಲದೆ ಪಂಜುರ್ಲಿ ಭೂತ ಕೋಲ ನಡೆಸುವ ಸಂಬಂಧಿತ ಮಾನ್ಯರನ್ನು ಭೇಟಿ ಮಾಡಿ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ. ತಜ್ಞರ ಜೊತೆಗೆ ಸಂಗ್ರಹ ಮಾಡಿದ ಮಾಹಿತಿಯನ್ನು ಚರ್ಚಿಸಿ ವಿಶ್ಲೇಷಣೆ ಮಾಡುವ ಅಧ್ಯಯನ ವಿಧಾನಕ್ಕೆ ಮಹತ್ವವಾದ ಸ್ಥಾನವಿದೆ.

6. ಸಮಾರೋಪ

ಪ್ರಸ್ತುತ ಈ ಪ್ರಬಂಧದಲ್ಲಿ ಇರುವಂತಹ ಒಟ್ಟು ಐದು ಅಧ್ಯಾಯಗಳನ್ನು ಸಮರೋಪಿಸಲಾಗಿದೆ. ದೈವನರ್ತಕರ ಮಾನವಾಭಿವೃದ್ಧಿಯನ್ನು ಕುರಿತು ಅಧ್ಯಾಯನದಲ್ಲಿ ಸವಿವರವಾಗಿ ತಿಳಿಸಲಾಗಿದೆ. ಮಾಹಿತಿದಾರರ ಮಾಹಿತಿಗಳಿಂದ ದೈವನರ್ತಕರ ಆರೋಗ್ಯ, ರಾಜಕೀಯ, ಆರ್ಥಿಕ ಪರಿಸ್ಥಿತಿ, ರಾಜಕೀಯ ಪರಿಸ್ಥಿತಿ, ಸಂಘಸಂಸ್ಥೆಗಳಲ್ಲಿ ಭಾಗವಹಿಸುವಿಕೆ ಇನ್ನೂ ಹತ್ತು ಹಲವಾರು ವಿಷಯಗಳ ಕುರಿತು ಬೆಳಕನ್ನು ಚೆಲ್ಲುತ್ತದೆ. ಒಟ್ಟಾರೆಯಾಗಿ ಈ ಸಂಶೋಧನೆಯಿಂದ ಅರಿವಿಗೆ ಬರುವ ಅಂಶವೆಂದರೇ ದೈವನರ್ತಕರಲ್ಲಿ ಕೆಲವು ಜನರು ಆರ್ಥಿಕ ಅಭಿವೃದ್ಧಿಯನ್ನು ಹೊಂದಿರುತ್ತಾರೆ. ಆದರೆ ಇನ್ನೂ ಸಾಕಷ್ಟು ಜನರು ಅಭಿವೃದ್ಧಿಯನ್ನು ಹೊಂದಬೇಕಾಗಿರುತ್ತದೆ. ದೈವನರ್ತಕರ ಮಾನವಾಭಿವೃದ್ಧಿಯಲ್ಲಿ ಅವರ ಜೀವನ ಮಟ್ಟವು ಸಾದಾರಣ ಮಟ್ಟದಿಂದ ಕೊಡಿದೆ ಎಂದೂ ಅಧ್ಯಯನದಿಂದ ತಿಳಿಯ ಬಹುದಾಗಿದೆ. ಸಂಶೋಧನೆಯಿಂದ ಕಂಡುಕೊಂಡ ಫಲಿತಗಳನ್ನು ಈ ಕೆಳಗಿನಂತೆ ಕಾಣಬಹುದು.

6.1 ಅಧ್ಯಯನದ ಫಲಿತಗಳು

6.1 : ನರ್ತಕರ ದತ್ತಾಂಶಗಳ ವಿಶ್ಲೇಷಣೆ

1. ವಯಸ್ಸಿನಾಧಾರದ ಮೇಲೆ ಪ್ರಶ್ನಾವಳಿ ಹಂಚಿಕೆಮಾಡಿರುವುದರಲ್ಲಿ ಒಟ್ಟು 300 ಜನ ಮಾಹಿತಿದಾರರಲ್ಲಿ 31–40 ವರ್ಷ ಸರಾಸರಿ ವಯಸ್ಸಿನವರು 169(56.33%) ಜನರು ಭಾಗವಹಿಸಿದ್ದಾರೆ. (ಕೋಷ್ಟಕ 5.1.1)
2. ಲಿಂಗಧಾರದ ಮೇಲೆ ಪ್ರಶ್ನಾವಳಿ ಹಂಚಿಕೆಮಾಡಿರುವುದರಲ್ಲಿ ಒಟ್ಟು 300 ಜನ ಮಾಹಿತಿದಾರರಲ್ಲಿ 292(97.3%) ಜನರು ಪುರುಷ ಮಾಹಿತಿದಾರರಾಗಿದ್ದಾರೆ. (ಕೋಷ್ಟಕ 5.1.2)
3. ಮಾತೃಭಾಷೆಯ ಆಧಾರದ ಮೇಲೆ ಪ್ರಶ್ನಾವಳಿ ಹಂಚಿಕೆಮಾಡಿರುವುದರಲ್ಲಿ ಒಟ್ಟು 300 ಜನ ಮಾಹಿತಿದಾರರಲ್ಲಿ 250(83.3%) ದಕ್ಷಿಣ ಕನ್ನಡ ಜಿಲ್ಲೆಯು ತುಳುನಾಡಾದ್ದ ಕಾರಣ ಅತಿ ಹೆಚ್ಚಿನ ಜನರು ತುಳು ಭಾಷೆಯನ್ನು ಮಾತನಾಡುವವರಾಗಿದ್ದಾರೆ. (ಕೋಷ್ಟಕ 5.1.3)
4. ಜನ್ಮ ಸ್ಥಳಾಧಾರದ ಮೇಲೆ ಪ್ರಶ್ನಾವಳಿ ಹಂಚಿಕೆ ಮಾಡಿರುವುದರಲ್ಲಿ ಒಟ್ಟು 300 ಜನ ಮಾಹಿತಿದಾರರಲ್ಲಿ 219(73%) ಜನರು ಗ್ರಾಮೀಣ ಭಾಗದವರಾಗಿದ್ದಾರೆ. (ಕೋಷ್ಟಕ 5.1.4)
5. ವೈವಾಹಿಕ ಅಂತಸ್ತಿನಧಾರದ ಮೇಲೆ ಪ್ರಶ್ನಾವಳಿ ಹಂಚಿಕೆ ಮಾಡಿರುವುದರಲ್ಲಿ ಒಟ್ಟು 300 ಜನ ಮಾಹಿತಿದಾರರಲ್ಲಿ 155(51.67%) ಜನರು ವಿವಾಹಿತರಾಗಿದ್ದಾರೆ. (ಕೋಷ್ಟಕ 5.1.5)
6. ವಿದ್ಯಾರ್ಹತೆಯ ಆಧಾರದ ಮೇಲೆ ಪ್ರಶ್ನಾವಳಿಗಳನ್ನು ಹಂಚಿಕೆ ಮಾಡಿರುವುದರಲ್ಲಿ ಒಟ್ಟು 300 ಜನ ಮಾಹಿತಿದಾರರಲ್ಲಿ, 104 (34.67%) ಜನರು ಮಾಧ್ಯಮಿಕ ಶಿಕ್ಷಣವನ್ನು ಪಡೆದಿರುವವರಾಗಿದ್ದಾರೆ. (ಕೋಷ್ಟಕ 5.1.6)
7. ಮೂಲ ಉದ್ಯೋಗಧಾರದ ಮೇಲೆ ಪ್ರಶ್ನಾವಳಿಗಳನ್ನು ಹಂಚಿಕೆ ಮಾಡಿರುವುದರಲ್ಲಿ ಒಟ್ಟು 300 ಜನ ಮಾಹಿತಿದಾರರಲ್ಲಿ, 85(28.33%) ಜನರು ಭೂತಾರಾಧನೆ ಮಾಡುವವರಾಗಿದ್ದಾರೆ. (ಕೋಷ್ಟಕ 5.1.7)

8. ಮೂಲ ಆದಾಯದ ಮಟ್ಟವನ್ನು ಕುರಿತಂತೆ ಪ್ರಶ್ನಾವಳಿಗಳನ್ನು ಹಂಚಿಕೆ ಮಾಡಲಾಯಿತು. ಅದರಲ್ಲಿ 162(54%) ಜನರು 12,000 ರೂಪಾಯಿಗಳಿಗಿಂತ ಹೆಚ್ಚಿನ ವೇತನವನ್ನು ಪಡೆಯುತ್ತಿರುವುದು ಕಂಡುಬರುತ್ತದೆ. (ಕೋಷ್ಟಕ 5.1.8)
9. ಇವರಲ್ಲಿ ಸ್ವಂತ ಮನೆಯ ಒಡೆತನವನ್ನು ಹೊಂದಿರುವವರ ಸಂಖ್ಯೆಯು 178(59.33%) ಇರುವುದು ಕಂಡುಬರುತ್ತದೆ. (ಕೋಷ್ಟಕ 5.1.9)
10. ಮನೆಯ ವಿಧದ ಕುರಿತು ವಿವರಿಸಲಾಗಿ, ಹೆಂಚಿನ ಮನೆಯನ್ನು ಹೊಂದಿರುವವರು 138(46%) ಪ್ರಮಾಣದಷ್ಟು ಹೊಂದಿದ್ದಾರೆ. (ಕೋಷ್ಟಕ 5.1.10)
11. ಮನೆಯಲ್ಲಿರುವ ಗೃಹ ಉಪಯೋಗಿ ವಸ್ತುಗಳು ಕುರಿತು ವಿವರಗಳನ್ನು ವಿವರಿಸಲಾಗಿ, ದೂರದರ್ಶನವನ್ನು 298(99.3%) ಹೊಂದಿರುವಂತಹದ್ದನ್ನು ಕಂಡುಕೊಳ್ಳಲಾಗಿದೆ. (ಕೋಷ್ಟಕ 5.1.11)
12. ಉಳಿತಾಯ ಮಾಡುತ್ತಿರುವುದರ ಕುರಿತು ವಿವರಿಸಲಾಗಿ, ಉಳಿತಾಯ ಮಾಡುವವರ ಸಂಖ್ಯೆ 212(70.7% ರಷ್ಟು ಇದೆ. (ಕೋಷ್ಟಕ 5.1.12)
13. ಉಳಿತಾಯದ ಮೂಲವನ್ನು ಪರಿಶೀಲಿಸಲಾಗಿ, ಬ್ಯಾಂಕಿನಲ್ಲಿ 212(100%) ಜನರು ತಮ್ಮ ಉಳಿತಾಯವನ್ನು ಮಾಡಿರುತ್ತಾರೆ. (ಕೋಷ್ಟಕ 5.1.13)
14. ಪಾರಂಪರಿಕ ಉದ್ಯೋಗ ದೈವ ನರ್ತನವನ್ನು ಮುಂದುವರಿಸುತ್ತಿರುವವರ ಕುರಿತು ಪರಿಶೀಲಿಸಲಾಗಿ, ಅದರಲ್ಲಿ ಪಾರಂಪರಿಕವಾಗಿ ದೈವ ನರ್ತನವನ್ನು ಮುಂದುವರಿಸುತ್ತಿರುವವರನ್ನು ಸಂಖ್ಯೆ 298(99.3%) ಇದೆ. (ಕೋಷ್ಟಕ 5.1.14)
15. ಉದ್ಯೋಗ ದೈವನರ್ತನವನ್ನು ಎಷ್ಟು ವರ್ಷಗಳಿಂದ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ವಿವರಿಸಲಾಗಿ, ಇದರಲ್ಲಿ ಒಂದರಿಂದ ಮೂರು ವರ್ಷಗಳ ಅವಧಿಯಲ್ಲಿ ದೈವನರ್ತನವನ್ನು ಮಾಡುತ್ತಿರುವವರ ಸಂಖ್ಯೆ 28(9.4%) ಜನ ಇತ್ತೀಚಿಗೆ ಕಂಡುಬರುತ್ತದೆ. (ಕೋಷ್ಟಕ 5.1.15)
16. ದೈವನರ್ತನ ಮಾಡುವುದರಿಂದ ನಿಮಗೆ ದೊರೆಯುವ ಆದಾಯ ಎಷ್ಟು ಎನ್ನುವ ಕುರಿತು ವಿವರಿಸಲಾಗಿದ್ದು, ಒಟ್ಟು 300 ಜನರಲ್ಲಿ, 196(65.8%) ಮಂದಿ 76,000 ದಿಂದ ಒಂದು ಲಕ್ಷದವರೆಗೆ ವಾರ್ಷಿಕ ಆದಾಯವು ದೊರೆಯುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.16)

17. ದೈವನರ್ತನದಿಂದ ಸಾಮಾಜಿಕ ಸ್ಥಾನಮಾನ ಅಥವಾ ಅಂತಸ್ತಿನಲ್ಲಿನ ಬದಲಾವಣೆ ಆಗಿದೆಯೇ ಎನ್ನುವ ಕುರಿತು ಪರಿಶೀಲಿಸಲಾಗಿ, 100ರಷ್ಟು ಮಂದಿ ದೈವನರ್ತನದಿಂದ ದೈವ ನರ್ತನದಲ್ಲಿ ಭಾಗಿಯಾಗುವುದರಿಂದ ಸಾಮಾಜಿಕ ಸ್ಥಾನಮಾನ ಹಾಗೂ ಅಂತಸ್ತಿನಲ್ಲಿ ಬದಲಾವಣೆ ಆಗಿರುವ ಬಗ್ಗೆ ಅಧಿಕೃತವಾಗಿ ಅಭಿಪ್ರಾಯವನ್ನು ಮಂಡಿಸಿದ್ದಾರೆ. (ಕೋಷ್ಟಕ 5.1.17)
18. ಕುಟುಂಬದಲ್ಲಿ ಹೆಚ್ಚಿನ ಗೌರವ ದೈವನರ್ತನದಿಂದ ಆಗಿದೆ ಎಂಬುದಾಗಿ 298 ಮಂದಿ ಅಂದರೆ ಶೇಕಡ 99.3 ರಷ್ಟು ಜನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.18)
19. ದೈವನರ್ತನದಿಂದ ಸಿಗುವ ಆದಾಯದಿಂದಾಗಿ ಕುಟುಂಬದ ನಿರ್ವಹಣೆಗೆ ಸಾಕಾಗುತ್ತದೆಯೇ ಎನ್ನುವುದರ ಕುರಿತು ಪರಿಶೀಲಿಸಲಾಗಿ, ಕುಟುಂಬದ ನಿರ್ವಹಣೆಯು ಸಾಕಾಗುತ್ತದೆ ಎಂಬುದಾಗಿ 202(67.3%) ಜನ ಅಭಿಪ್ರಾಯವನ್ನು ಸೂಚಿಸಿದ್ದಾರೆ. (ಕೋಷ್ಟಕ 5.1.19)
20. ದೈವನರ್ತಕರ ಸಂಖ್ಯೆ ಕಡಿಮೆಯಾಗುತ್ತಿದೆಯೇ ಎನ್ನುವ ಅಂಶವನ್ನು ಕುರಿತು ಪರಿಶೀಲಿಸಲಾಗಿ, ದೈವನರ್ತಕರ ಸಂಖ್ಯೆಯು ಕಡಿಮೆಯಾಗುತ್ತಿದೆ ಎನ್ನುವ ಅಭಿಪ್ರಾಯವನ್ನು ಶೇಕಡ 54.7 ರಷ್ಟು ಮಂದಿ ಅಂದರೆ 164 ಜನರು ತಿಳಿಸಿರುತ್ತಾರೆ. (ಕೋಷ್ಟಕ 5.1.20)
21. ದೈವನರ್ತಕರ ಸಂಖ್ಯೆ ಕಡಿಮೆಯಾಗುತ್ತಿರುವುದಕ್ಕೆ ಕಾರಣಗಳು ಏನು ಎಂಬುದರ ಕುರಿತು ಪರಿಶೀಲಿಸಲಾಗಿ, ಜಾತಿ ತಾರತಮ್ಯದ ಕಾರಣದಿಂದ ದೈವನರ್ತಕರು ಕಡಿಮೆಯಾಗುತ್ತಿರಬಹುದೇ? ಎಂಬ ಪ್ರಶ್ನೆಗೆ 164 (100%) ಮಂದಿಯು ಹೌದು ಎಂಬುದಾಗಿ ಉತ್ತರವನ್ನು ನೀಡಿರುತ್ತಾರೆ. (ಕೋಷ್ಟಕ 5.1.21)
22. ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ಕುರಿತು ಪರಿಶೀಲಿಸಲಾಗಿ, ಹೌದು ಎಂಬುದಾಗಿ 230(76.7%) ಮಂದಿ ಪ್ರಶ್ನಾವಳಿಗಳಿಗೆ ಉತ್ತರಿಸಿದ್ದಾರೆ. (ಕೋಷ್ಟಕ 5.1.22)
23. ಶಿಕ್ಷಣಕ್ಕೆ ಪ್ರೋತ್ಸಾಹ ಯಾವ ಮಟ್ಟದ ಶಿಕ್ಷಣಕ್ಕೆ ನೀವು ಪ್ರೋತ್ಸಾಹವನ್ನು ನೀಡುತ್ತಿದ್ದೀರಿ ಎಂಬುದರ ಕುರಿತು ಪರಿಶೀಲಿಸಲಾಗಿ, 230 ಮಂದಿಗೆ ಪ್ರಶ್ನಾವಳಿಗಳನ್ನು ಹಂಚಿಕೆ ಮಾಡಲಾಯಿತು. ಅದರಲ್ಲಿ ಹೌದು ಎಂಬುದಾಗಿ ಡಿಗ್ರಿ ಪದವಿಗೆ 155 ಮಂದಿ ಉತ್ತರಿಸಿದ್ದಾರೆ. (ಕೋಷ್ಟಕ 5.1.23)

24. ಶಾಲೆಯನ್ನು ಅರ್ಧಕ್ಕೆ ಬಿಟ್ಟಿರುವುದರ ಕುರಿತು ಪರಿಶೀಲಿಸಲಾಗಿ, ಒಟ್ಟು 230 ಜನಕ್ಕೆ, ಇಲ್ಲ ಎಂಬುದಾಗಿ 181 ಜನ ಅಂದರೆ ಶೇಕಡ 78.7 ರಷ್ಟು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.24)

25. ಶೈಕ್ಷಣಿಕ ಸೌಲಭ್ಯಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಪಡೆದಿರುವ ಸೌಲಭ್ಯಗಳ ಯಾವುದೇಂಬುದಾಗಿ 100% ಜನರು ಸೂಚಿಸಿರುತ್ತಾರೆ. (ಕೋಷ್ಟಕ 5.1.25)

26. ಸರ್ಕಾರದ ವತಿಯಿಂದ ಯಾವ ಬಗೆಯ ಸೌಲಭ್ಯವನ್ನು ಬಳಸಿಕೊಂಡಿದ್ದೀರಿ ಎಂಬುದರ ಕುರಿತು ಪರಿಶೀಲಿಸಲಾಗಿ, ಎಲ್ಲಾ 230(100%) ಜನರು ವಿದ್ಯಾರ್ಥಿವೇತನ, ವಸತಿ ನಿಲಯದ ಸೌಲಭ್ಯ, ಉಚಿತ ಪುಸ್ತಕಗಳು, ಅದೇ ರೀತಿಯಲ್ಲಿ ಇತರೆ ಸೌಲಭ್ಯಗಳನ್ನು ಪಡೆದಿದ್ದೇವೆ ಎನ್ನುವ ಉತ್ತರವನ್ನು ಕೊಟ್ಟಿರುತ್ತಾರೆ. (ಕೋಷ್ಟಕ 5.1.26)

27. ಸರಕಾರದ ಸೌಲಭ್ಯಗಳ ಮಾಹಿತಿ ಯನ್ನು ತಿಳಿಯುವ ಮೂಲ ಯಾವುದು ಎಂಬುದರ ಕುರಿತು ಪರಿಶೀಲಿಸಲಾಗಿ, 230 ಮಂದಿಗೆ, ಮಾಧ್ಯಮಗಳ ಮೂಲಕ ಮಾಹಿತಿಯನ್ನು ಪಡೆದಿರುವುದಾಗಿ 165 ಮಂದಿ ಅಂದರೆ 21.7 ರಷ್ಟು ಹೌದು ಎನ್ನುವುದಾಗಿ ಉತ್ತರಿಸಿರುತ್ತಾರೆ. (ಕೋಷ್ಟಕ 5.1.27)

28. ಹೆಣ್ಣು ಮಕ್ಕಳ ಉನ್ನತ ಶಿಕ್ಷಣಕ್ಕೆ ಪ್ರಶಸ್ತಿ ನೀಡಲಾಗಿದೆಯೇ ಎಂಬುದರ ಕುರಿತು ಪರಿಶೀಲಿಸಲಾಗಿ, ಒಟ್ಟು 300 ಜನರಲ್ಲಿ ಹೆಣ್ಣು ಮಕ್ಕಳ ಉನ್ನತ ಶಿಕ್ಷಣವನ್ನು ನೀಡುವುದರ ಬಗ್ಗೆ ಹೌದು ಎಂಬುದಾಗಿ 235 ಮಂದಿ ಅಂದರೆ ಶೇಕಡ 78.3ರಷ್ಟು ಮಂದಿ ಉತ್ತರಿಸಿರುತ್ತಾರೆ. (ಕೋಷ್ಟಕ 5.1.28)

29. ಹೆಣ್ಣು ಮಕ್ಕಳ ಉನ್ನತ ಶಿಕ್ಷಣಕ್ಕೆ ಪ್ರಶಸ್ತಿ ನೀಡದಿರುವುದಕ್ಕೆ ಕಾರಣಗಳು ಏನು ಎಂಬುದರ ಕುರಿತು ಪರಿಶೀಲಿಸಲಾಗಿ, 235 ಜನರಲ್ಲಿ ಎಲ್ಲರೂ 235(100%) ಜನರು ಬಡತನದ ಕಾರಣದಿಂದ ಹೆಣ್ಣು ಮಕ್ಕಳ ಉನ್ನತ ಶಿಕ್ಷಣಕ್ಕೆ ಪ್ರಶಸ್ತಿ ನೀಡಲಿಲ್ಲ ಎನ್ನುವ ಉತ್ತರವನ್ನು ನೀಡಿರುತ್ತಾರೆ. (ಕೋಷ್ಟಕ 5.1.29)

30. ದೈವಾರಾಧನೆಯನ್ನು ಮಾಡುವವರ ಮಕ್ಕಳು ಯಾವ ಉದ್ಯೋಗವನ್ನು ಮಾಡಬೇಕೆಂದು ಇಚ್ಛೆಯನ್ನು ವ್ಯಕ್ತಪಡಿಸುತ್ತೀರಿ ಎಂಬುದರ ಕುರಿತು ಪರಿಶೀಲಿಸಲಾಗಿ, ಎಲ್ಲಾ 300(100%) ಪೋಷಕರು ತಮ್ಮ ಮಕ್ಕಳು ಸರ್ಕಾರಿ ಹುದ್ದೆಗೆ ಹೋಗಬೇಕೆಂದು ಬಯಸಿದ್ದಾರೆ. (ಕೋಷ್ಟಕ 5.1.30)

31. ಪಾರಂಪರಿಕ ಉದ್ಯೋಗದಲ್ಲಿ ಅಂದರೆ ದೈವಾರಾಧನೆಯಲ್ಲಿ ಮಹಿಳೆಯರು ತೊಡಗಿಸಿಕೊಂಡಿರುವುದರ ಕುರಿತು ಪರಿಶೀಲಿಸಲಾಗಿ, ಹೌದು ಎನ್ನುವ ಉತ್ತರವನ್ನು 113(37.7%) ಮಂದಿ ವ್ಯಕ್ತಪಡಿಸುತ್ತಾರೆ. (ಕೋಷ್ಟಕ 5.1.31)

32. ದೈವನರ್ತನ ಮಾಡುವ ಕುಟುಂಬಗಳಲ್ಲಿ ಸಂಘ–ಸಂಸ್ಥೆಗಳಲ್ಲಿ ಸದಸ್ಯರಾಗಿದ್ದು ಸದಸ್ಯರಾಗಿರುವುದರ ಬಗೆಗೆ ಪರಿಶೀಲಿಸಲಾಗಿ, ಸಂಘ–ಸಂಸ್ಥೆಗಳಲ್ಲಿ ದೈವನರ್ತನ ಮಾಡುವ ಕುಟುಂಬದವರು ಸದಸ್ಯರಾಗಿರುವುದಾಗಿ 271(90.3%) ಜನರು ಹೇಳಿಕೆಯನ್ನು ನೀಡಿರುತ್ತಾರೆ. (ಕೋಷ್ಟಕ 5.1.32)

33. ವಿವಿಧ ಬಗೆಯ ಸಂಘ ಸಂಸ್ಥೆಗಳು ಕುರಿತು ಪರಿಶೀಲಿಸಲಾಗಿ, ಮಹಿಳಾ ಸಂಘದಲ್ಲಿ ಭಾಗವಯಿಸಿರುವುದಾಗಿ 158(58.3%) ಮಂದಿ ಹೌದು ಎಂಬ ಉತ್ತರವನ್ನು ನೀಡಿರುತ್ತಾರೆ. (ಕೋಷ್ಟಕ 5.1.33)

34. ಅನಾರೋಗ್ಯ ಸಂದರ್ಭದಲ್ಲಿ ಔಷಧಿಯನ್ನು ಪಡೆಯುವುದರ ಬಗ್ಗೆ ಪರಿಶೀಲಿಸಲಾಗಿ, ಸರ್ಕಾರಿ ಆಸ್ಪತ್ರೆಯಲ್ಲಿ ಔಷಧಿ ಪಡೆಯಲಾಗುವುದೆಂದು ಎಲ್ಲ 300(100%) ಜನರು ವಿವರಿಸಿದ್ದಾರೆ. (ಕೋಷ್ಟಕ 5.1.34)

35. ಅನಾರೋಗ್ಯದ ಸಂದರ್ಭದಲ್ಲಿ ವಿವಿಧ ರೀತಿಯ ಔಷಧಿಯನ್ನು ಪಡೆಯುವುದರ ಬಗ್ಗೆ ಪರಿಶೀಲಿಸಲಾಗಿ, ಅದರಲ್ಲಿ ಆಲೋಪತಿ ಔಷಧಿಯನ್ನು ಪಡೆಯುವುದಾಗಿ 164(54.7%) ಜನರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.35)

36. ಸರಕಾರಿ ಆಲೋಪತಿ ಸವಲತ್ತಿನ ಕುರಿತು ಪರಿಶೀಲಿಸಲಾಗಿ, ಅದರಲ್ಲಿ ಸರ್ಕಾರಿ ಆಲೋಪತಿ ಸವಲತ್ತನ್ನು ಎಲ್ಲರೂ 300 ಜನ ಮಾಹಿತಿದಾರರು ಪಡೆದಿರುವುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.36)

37. ಶಿಶು ಮರಣ ಹೊಂದಿದ ಪ್ರಕರಣಗಳ ಕುರಿತು ಪರಿಶೀಲಿಸಲಾಗಿ, ಅದರಲ್ಲಿ ಶಿಶುಮರಣವನ್ನು ಹೊಂದಿದ ಪ್ರಕರಣಗಳಿವೆ ಎಂದು 298(99.3%) ಜನರು ತಿಳಿಸಿದ್ದಾರೆ. (ಕೋಷ್ಟಕ 5.1.37)

38. ಶಿಶು ಮರಣ ಹೊಂದುವುದಕ್ಕೆ ಕಾರಣಗಳು ಏನು ಎಂಬುದಾಗಿ ಕುರಿತು ಪರಿಶೀಲಿಸಲಾಗಿ, 298(100%) ಜನರು ಶಿಶುಮರಣವನ್ನು ಹೊಂದಲು ಸರಿಯಾಗಿ ಆಸ್ಪತ್ರೆಯ ಸೌಕರ್ಯ ಇಲ್ಲದಿರುವುದು, ರೋಗಕ್ಕೆ ತುತ್ತಾಗುತ್ತಿರುವುದು, ವೈದ್ಯರ ನಿರ್ಲಕ್ಷ್ಯ

ಮತ್ತು ಅಪೌಷ್ಟಿಕತೆಯಿಂದ ಬಳಲಿ ಮರಣವನ್ನು ಹೊಂದುತ್ತಿರುವುದಾಗಿ ತಿಳಿಸಿದ್ದಾರೆ. (ಕೋಷ್ಟಕ 5.1.38)

39. ಕುಟುಂಬದ ಧಾರ್ಮಿಕ ಆಚರಣೆಯಲ್ಲಿ ಪ್ರಮುಖ ಸ್ಥಾನವಹಿಸುವವರು ಕುರಿತು ಪರಿಶೀಲಿಸಲಾಗಿ, ನಮ್ಮ ಸಮುದಾಯದ ಹಿರಿಯರು ಕುಟುಂಬದ ಧಾರ್ಮಿಕ ಆಚರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂಬುದಾಗಿ 300(100.0%) ಜನರು ಅಭಿಪ್ರಾಯಪಟ್ಟಿದ್ದಾರೆ. (ಕೋಷ್ಟಕ 5.1.39)

40. ಬಾಳ ಸಂಗಾತಿಯನ್ನು ಆಯ್ಕೆ ಮಾಡುವ ಕುರಿತು ಪರಿಶೀಲಿಸಲಾಗಿ, ಅದರಲ್ಲಿ ಹೆತ್ತವರು ತಮ್ಮ ಮಕ್ಕಳ ಬಾಳಸಂಗತಿಯನ್ನು ಆಯ್ಕೆ ಮಾಡುತ್ತಾರೆ ಎಂಬ ಅಭಿಪ್ರಾಯವನ್ನು 300(100%) ಮಾಹಿತಿದಾರರು ನೀಡಿರುತ್ತಾರೆ. (ಕೋಷ್ಟಕ 5.1.40)

41. ಮದುವೆ ಕಾರ್ಯಗಳನ್ನು ನೆರವೇರಿಸುವ ಕುರಿತು ಅಭಿಪ್ರಾಯವನ್ನು ಕೇಳಲಾಗಿ, ಜನಾಂಗದ ಮುಖಂಡರು ಮದುವೆ ಕಾರ್ಯವನ್ನು ನೆರವೇರಿಸುವರೆಂದು 298(99.3%) ಜನರು ಹೇಳುತ್ತಾರೆ. (ಕೋಷ್ಟಕ 5.1.41)

42. ಪುನರ್ ವಿವಾಹದ ಕುರಿತು ಪರಿಶೀಲಿಸಲಾಗಿ, ಪುನರ್ ವಿವಾಹ ತಮ್ಮ ಸಮುದಾಯದಲ್ಲಿ ಇಲ್ಲ ಎಂಬ ಅಭಿಪ್ರಾಯವನ್ನು 168(56%) ಜನರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.42)

43. ವರದಕ್ಷಿಣೆಯನ್ನು ನೀಡಿರುವುದರ ಕುರಿತು ಪರಿಶೀಲಿಸಲಾಗಿ, ಅದರಲ್ಲಿ 136(45.3%) ಜನರು ನಾವು ವರದಕ್ಷಿಣೆಯನ್ನು ನೀಡಿರುವುದಾಗಿ ಒಪ್ಪಿಕೊಂಡಿದ್ದಾರೆ. (ಕೋಷ್ಟಕ 5.1.43)

44. ವರದಕ್ಷಿಣೆಯನ್ನು ತೆಗೆದುಕೊಂಡಿರುವುದರ ಕುರಿತು ಪರಿಶೀಲಿಸಲಾಗಿ, 214(71.3%) ಮಂದಿ ಮಾಹಿತಿದಾರರು ವರದಕ್ಷಿಣೆಯನ್ನು ತೆಗೆದುಕೊಂಡಿರುವುದಾಗಿ ತಮ್ಮ ಒಪ್ಪಿಗೆಯನ್ನು ತಿಳಿಸಿರುತ್ತಾರೆ. (ಕೋಷ್ಟಕ 5.1.44)

45. ಕುಟುಂಬದಲ್ಲಿ ಅಂತರ್ ಜಾತಿಯ ವಿವಾಹಕ್ಕೆ ಅವಕಾಶದ ಬಗ್ಗೆ ಪರಿಶೀಲಿಸಲಾಗಿ, ಅಂತರ್ಜಾತಿ ವಿವಾಹವು ಜರುಗುವುದೆಂದು 300(100%) ಅಭಿಪ್ರಾಯವನ್ನು ತಿಳಿಸಿದ್ದಾರೆ. (ಕೋಷ್ಟಕ 5.1.45)

46. ದೈವ ನರ್ತನ ಮಾಡುವವರು ಯಾವ ಜಾತಿಯವರೊಂದಿಗೆ ವಿವಾಹವಾಗಲು ಬಯಸುತ್ತೀರಿ ಎನ್ನುವುದರ ಕುರಿತು ಪರಿಶೀಲಿಸಲಾಗಿ, ದೈವನರ್ತಕ ಜಾತಿಯವರ

ಜೊತೆ ಮದುವೆಯಾಗುವುದೆಂದು 300(100%) ಮಂದಿಯು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.46)

47. ವಿವಾಹ ವಿಚ್ಛೇದನವಾದ ಉದಾಹರಣೆಗಳ ಕುರಿತು ಚರ್ಚಿಸಲಾಗಿದ್ದು, ಒಟ್ಟು 300 ಜನರಲ್ಲಿ, 298(99.3%) ಮಾಹಿತಿದಾರರು ಹೌದು ಎಂದು ಸಮ್ಮತಿಯನ್ನು ಸೂಚಿಸಿರುತ್ತಾರೆ. (ಕೋಷ್ಟಕ 5.1.47)

48. ವಿವಾಹ ವಿಚ್ಛೇದನ ನಡೆಯುವ ಸ್ಥಳ ಕುರಿತು ಎನ್ನುವುದರ ಕುರಿತು ಪರಿಶೀಲಿಸಲಾಗಿ, ನ್ಯಾಯಾಲಯಗಳಲ್ಲಿ ವಿವಾಹ ವಿಚ್ಛೇದನ ನಡೆಸುತ್ತೀರಾ ಎನ್ನುವ ಪ್ರಶ್ನೆಗೆ ಇನ್ನೂ 298(100%) ಮಂದಿ ಹೌದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. (ಕೋಷ್ಟಕ 5.1.48)

49. ವಿಚ್ಛೇದಿತ ಮಹಿಳೆಗೆ ನೀಡುವ ಸ್ಥಾನಮಾನದ ಕುರಿತು ಮಾಹಿತಿದಾರರಿಗೆ ಪರಿಶೀಲಿಸಲಾಗಿ, ಇನ್ನು 298 ಮಂದಿಗೆ ಪ್ರಶ್ನೆಗಳನ್ನು ಕೇಳಲಾಗಿ, ಇತರರಂತೆ ಸಮಾನ ಸ್ಥಾನಮಾನವನ್ನು ನೀಡಿದ್ದೀರಾ ಎಂದು ಪ್ರಶ್ನೆಯನ್ನು ಕೇಳಲಾಗಿ ಇಲ್ಲ ಎಂಬುದಾಗಿ ಇನ್ನೂ 298(100%) ರಷ್ಟು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.49)

50. ಮೇಲ್ಜಾತಿ ವ್ಯಕ್ತಿಗಳು ಸಮೂಹನ ಮಾಡುವುದರ ಬಗ್ಗೆ ಪರಿಶೀಲಿಸಲಾಗಿ, 272 ಮಂದಿ ಶೇಕಡ 90.7% ರಷ್ಟು ಮಾಹಿತಿದಾರರು ಹೌದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.50)

51. ಮೇಲ್ಜಾತಿಯ ವ್ಯಕ್ತಿಗಳು ನಿಮ್ಮ ಮನೆಯ ಒಳಗೆ ಪ್ರವೇಶ ಮಾಡುವುದರ ಕುರಿತು ಪರಿಶೀಲಿಸಲಾಗಿ, ಇದರಲ್ಲಿ 13(4.3%) ಮಂದಿ ಹೌದು ಎಂಬ ಅಭಿಪ್ರಾಯವನ್ನು ಮಾಹಿತಿದಾರರು ಉತ್ತರವನ್ನು ನೀಡಿದ್ದಾರೆ. (ಕೋಷ್ಟಕ 5.1.51)

52. ಮನೆಯ ಒಳಗೆ ಪ್ರವೇಶಿಸುವುದರ ಸಂದರ್ಭದಲ್ಲಿ ಕುರಿತು ಪರಿಶೀಲಿಸಲಾಗಿ, ಮನೆಯ ಒಳಗೆ ಗೃಹಪ್ರವೇಶದ ಸಂದರ್ಭದಲ್ಲಿ 13(100%) ಮಂದಿ ಪ್ರವೇಶಿಸುತ್ತಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. (ಕೋಷ್ಟಕ 5.1.52)

53. ಸಾಮಾಜಿಕ ಮತ್ತು ಆರ್ಥಿಕ ಜೀವನದ ಮೇಲೆ ಅನ್ಯ ಜಾತಿಯವರ ಪ್ರಭಾವ ಹೇಗಿದೆ ಎಂಬ ಕುರಿತು ಪರಿಶೀಲಿಸಲಾಗಿ, ಅನ್ಯ ಜಾತಿಯವರ ಪ್ರಭಾವ ಇದೆ ಎಂಬ ಅಭಿಪ್ರಾಯವನ್ನು 298(99.3%) ಮಂದಿ ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.53)

54. ಅನ್ಯ ಜಾತಿಯವರು ಬೀರಿರುವ ಪ್ರಭಾವವನ್ನು ಕುರಿತು ಪರಿಶೀಲಿಸಲಾಗಿ, 162(54%) ಹಣಕಾಸಿನ ತುರ್ತು ಸಮಯದಲ್ಲಿ ಹಾಗೂ ಜನರು ಅನ್ಯ ಜಾತಿಯವರು ಮಕ್ಕಳಿಗೆ ಉದ್ಯೋಗ ದೊರಕಿಸಿಕೊಡುವಲ್ಲಿ ಪ್ರಭಾವವನ್ನು ಬೀರಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.54)
55. ಅನಾರೋಗ್ಯದ ಕುರಿತು ಚರ್ಚಿಸಲಾಗಿದ್ದು, 298(99.3%) ಜನರು ಅನಾರೋಗ್ಯಕ್ಕೆ ಒಳಗಾಗುವುದಾಗಿ ಒಪ್ಪಿಕೊಂಡಿರುತ್ತಾರೆ. (ಕೋಷ್ಟಕ 5.1.55)
56. ಅನಾರೋಗ್ಯದ ಸಮಸ್ಯೆಗಳ ಕುರಿತು ಪರಿಶೀಲಿಸಲಾಗಿ ಒಟ್ಟು 298 ಜನರಲ್ಲಿ, 290 (97.3%) ಜನರು ಮಂಡಿನೋವಿನ ಸಮಸ್ಯೆಯಿಂದ ಬಳಲುತ್ತಿರುವುದಾಗಿ ಹೇಳಿಕೆಯನ್ನು ನೀಡಿರುತ್ತಾರೆ. (ಕೋಷ್ಟಕ 5.1.56)
57. ಮದ್ಯಪಾನದ ಕುರಿತು ಪರಿಶೀಲಿಸಲಾಗಿ, ಅದರಲ್ಲಿ 298(99.3%) ಜನರು ಮದ್ಯಪಾನ ಸೇವನೆ ಮಾಡಲಾಗುವುದೆಂದು ಒಪ್ಪಿಕೊಂಡಿರುತ್ತಾರೆ. (ಕೋಷ್ಟಕ 5.1.57)
58. ಮಧ್ಯಪಾನ ಸೇವನೆ ಮಾಡುವ ಸಂದರ್ಭಗಳು ಯಾವುದು ಎನ್ನುವ ಕುರಿತು ಪರಿಶೀಲಿಸಲಾಗಿ, ಅದರಲ್ಲಿ ಪ್ರತಿದಿನ ಮಧ್ಯಪಾನ ಮಾಡಲಾಗುವುದಿಲ್ಲವೆಂದು 298(99.3%) ಜನರು ಹೇಳುತ್ತಾರೆ. (ಕೋಷ್ಟಕ 5.1.58)
59. ಮಧ್ಯಪಾನ ಸೇವನೆ ಮಾಡಲು ಕಾರಣಗಳು ಏನು ಎನ್ನುವುದರ ಕುರಿತು ಪರಿಶೀಲಿಸಲಾಗಿ, ಅದರಲ್ಲಿ ಸಂತೋಷಕ್ಕಾಗಿ ಮತ್ತು ದೈಹಿಕ ನಿವೇದನೆಗಾಗಿ ಮಧ್ಯಪಾನವನ್ನು ಮಾಡಲಾಗುವುದೆಂದು 162(54.0%) ಜನರು ಹೌದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.59)
60. ತಿಂಗಳಲ್ಲಿ ಮಧ್ಯ ಸೇವನೆಗಾಗಿ ವ್ಯಯ ಮಾಡುವ ಹಣದ ಕುರಿತು ಪರಿಶೀಲಿಸಲಾಗಿ, ಅದರಲ್ಲಿ ವ್ಯಯ ಮಾಡುವ ಹಣ 400 ರಿಂದ 800 ರೂಪಾಯಿಗಳೆಂದು 162(54%) ಜನರು ಅಭಿಪ್ರಾಯಪಟ್ಟಿದ್ದಾರೆ. (ಕೋಷ್ಟಕ 5.1.60)
61. ರಾಜಕೀಯ ಕ್ಷೇತ್ರದಲ್ಲಿ ಭಾಗವಯಿಸುವುದರ ಬಗ್ಗೆ ಪರಿಶೀಲಿಸಲಾಗಿ, ಅದರಲ್ಲಿ 213(71%) ಜನರು ರಾಜಕೀಯದಲ್ಲಿ ಸಕ್ರೀಯವಾಗಿ ಭಾಗವಹಿಸಲಾಗುವುದೆಂದು ಒಪ್ಪಿಕೊಂಡಿರುತ್ತಾರೆ. (ಕೋಷ್ಟಕ 5.1.61)

62. ರಾಜಕೀಯ ಕ್ಷೇತ್ರದಲ್ಲಿನ ಸ್ಥಾನಮಾನವನ್ನು ಕುರಿತು ಪರಿಶೀಲಿಸಲಾಗಿ, ಅದರಲ್ಲಿ ಒಟ್ಟು 213 ಜನರಲ್ಲಿ, 98(46%) ಜನರು ಅಧ್ಯಕ್ಷರಾಗಿ ಸ್ಥಾನಮಾನವನ್ನು ಹೊಂದಿರುವುದಾಹಿ ತಿಳಿಸಿರುತ್ತಾರೆ. (ಕೋಷ್ಟಕ 5.1.62)

63. ರಾಜಕೀಯ ಕ್ಷೇತ್ರದಲ್ಲಿ ಭಾಗವಹಿಸುವ ಪ್ರಭಾವ ಬೀರಿದವರು ಯಾರು ಎಂಬ ಬಗ್ಗೆ ಪರಿಶೀಲಿಸಲಾಗಿ, ಸ್ವಯಂ ಪ್ರೇರಿತರಾಗಿ 102(47.9%) ಮಂದಿ ರಾಜಕೀಯ ಕ್ಷೇತ್ರದಲ್ಲಿ ಭಾಗವಹಿಸುವುದಕ್ಕೆ ತಾವೇ ಸ್ವಂತ ಅಭಿಪ್ರಾಯದಲ್ಲಿ ಎಂಬ ವಿಷಯವನ್ನು ವ್ಯಕ್ತಪಡಿಸುತ್ತಾರೆ. (ಕೋಷ್ಟಕ 5.1.63)

64. ರಾಜಕೀಯದಲ್ಲಿ ಹೆಚ್ಚಿನ ಪ್ರೋತ್ಸಾಹ ನೀಡಿರುವವರ ಕುರಿತು ಪರಿಶೀಲಿಸಲಾಗಿ, ನಿಮ್ಮದೇ ಸಮುದಾಯದವರಿಂದ ಹೆಚ್ಚಿನ ಪ್ರೋತ್ಸಾಹ ದೊರೆತಿದಿಯೇ ಎಂಬ ಪ್ರಶ್ನೆಗೆ ಹೌದು ಎನ್ನುವ ಅಭಿಪ್ರಾಯವನ್ನು 213(100%) ಮಂದಿಯು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.64)

65. ನಲಿಕೆ ಸಮುದಾಯದವರು ಸಂಘ ಸಂಸ್ಥೆಗಳಲ್ಲಿ ಭಾಗವಹಿಸಿದರ ಕುರಿತು ಪರಿಶೀಲಿಸಲಾಗಿ, ಒಟ್ಟು 300 ಮಾಹಿತಿದಾರರಲ್ಲಿ, 298(99.3%) ರಷ್ಟು ಮಂದಿ ಹೌದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.65)

66. ಸಂಘ ಸಂಸ್ಥೆಗಳಿಂದ ಆದ ಬೆಳವಣಿಗೆಗಳ ಕುರಿತು ಪರಿಶೀಲಿಸಲಾಗಿ, ಒಟ್ಟು 298 ಜನರಲ್ಲಿ, ಎಲ್ಲಾ 298(100%) ಜನರು ಸಂಘ-ಸಂಸ್ಥೆಗಳಿಂದಾಗಿ ನಮಗೆ ಆರ್ಥಿಕ ಪ್ರೋತ್ಸಾಹ ಮತ್ತು ಇತರೆ ರೀತಿಯಾದಂತಹ ಸಹಾಯ ಸಹಕಾರಗಳಾಗಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.66)

67. ಸಂಘ ಸಂಸ್ಥೆಗಳ ಸೌಲಭ್ಯಗಳ ಪಡೆದಿರುವ ಬಗ್ಗೆ ಪರಿಶೀಲಿಸಲಾಗಿ, ಒಟ್ಟು 298 ಜನರಲ್ಲಿ ಎಲ್ಲರೂ ಸಹ ಸಂಘ-ಸಂಸ್ಥೆಗಳಿಂದ ಸೌಲಭ್ಯವನ್ನು ಪಡೆದಿರುವುದನ್ನು ಖಚಿತಪಡಿಸಿದ್ದಾರೆ. (ಕೋಷ್ಟಕ 5.1.67)

68. ಸರಕಾರದಿಂದ ದೈವನರ್ತಕ ಸಮುದಾಯದವರು ನಿರೀಕ್ಷಿಸುತ್ತಿರುವುದು ಏನು ಎನ್ನುವುದನ್ನು ಕುರಿತು ಪರಿಶೀಲಿಸಲಾಗಿ, ಒಟ್ಟು 298 ಮಾಹಿತಿದಾರರಲ್ಲಿ, 220(73.8%) ಜನರು ಹೆಚ್ಚಿನ ಮೀಸಲಾತಿ ಸೌಲಭ್ಯ ದೊರೆಯುವಂತೆ ಆಗಬೇಕು ಎನ್ನುವ ನಿಲುವನ್ನು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.68)

69. ಸರಕಾರದ ಕಾರ್ಯಕ್ರಮಗಳು ಕುರಿತು ಅಭಿಪ್ರಾಯವನ್ನು ಪರಿಶೀಲಿಸಲಾಗಿ, ಒಟ್ಟು 298 ಜನರಲ್ಲಿ, 278 (93.3%) ಜನರು ಜನಧನ್ ಯೋಜನೆಯನ್ನು ಸದ್ಬಳಕೆ ಮಾಡಿಕೊಂಡಿರುವುದಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. (ಕೋಷ್ಟಕ 5.1.69)

70. ಸರಕಾರದ ಯೋಜನೆಗಳ ಬಗ್ಗೆ ಮಾಹಿತಿಯನ್ನು ಪಡೆಯುವ ಮೂಲ ಯಾವುದು ಎಂದು ಪರಿಶೀಲಿಸಲಾಗಿ, 287(96.3%) ಜನರು ಸರಕಾರಿ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆಯುವುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.70)

71. ಸರ್ಕಾರದ ಯೋಜನೆಗಳಿಂದ ದೈವನರ್ತನ ಸಮುದಾಯದವರಿಗೆ ಅನುಕೂಲವಾಗಿರುವುದರ ಕುರಿತು ವಿವರಿಸಲಾಗಿದ್ದು, 300(100%) ಜನರು ನಮಗೆ ಸರ್ಕಾರದ ಈ ಯೋಜನೆಗಳಿಂದ ಅನುಕೂಲವಾಗಿದೆ ಎಮಧು ತಿಳಿಸಿದ್ದಾರೆ. (ಕೋಷ್ಟಕ 5.1.71)

72. ದೈವನರ್ತನದಿಂದ ಸಿಗುವ ವಿವಿಧ ರೀತಿಯ ಸಂಭಾವನೆಯನ್ನು ಕುರಿತು ವಿವರಸಲಾಗಿದ್ದು, 300(100%) ಜನರು ತಾವು ಹಣದ ರೂಪದಲ್ಲಿ ಮತ್ತು ಗೌರವದ ರೂಪದಲ್ಲಿ ಸಂಭಾವನೆಯನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. (ಕೋಷ್ಟಕ 5.1.72)

73. ಒಂದು ನಿಗದಿತ ವರ್ಷದಲ್ಲಿ ದೊರಕುವ ಪ್ರದರ್ಶನಗಳ ಕುರಿತು ತಿಳಿಯಲು ಪ್ರಯಸತ್ನಿಸಲಾಗಿದ್ದು, ಅದರಲ್ಲಿ 5 ರಿಂದ 20 ಪ್ರದರ್ಶನಗಳು ಒಂದು ವರ್ಷದಲ್ಲಿ ದೊರೆಯುವುದಾಗಿ 52(17.3%) ಮಂದಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಕೋಷ್ಟಕ 5.1.73)

74. ದೈವಾರಾಧನೆಯನ್ನು ಹೊರತುಪಡಿಸಿ ಬೇರೆ ಯಾವ ಉದ್ಯೋಗವನ್ನು ದೈವನರ್ತನ ಸಮುದಾಯದವರು ಮಾಡುತ್ತಾರೆ ಎಂದು ಚರ್ಚಿಸಲಾಯಿತು. 300(100%) ಜನರು ಕೂಲಿ ಕೆಲಸವನ್ನು ಮಾಡುವುದಾಗಿ ತಿಳಿಯಪಡಿಸುತ್ತಾರೆ. (ಕೋಷ್ಟಕ 5.1.74)

75. ದೈವ ನರ್ತನ ಸಮುದಾಯದವರ ಮಕ್ಕಳ ವಿದ್ಯಾಭ್ಯಾಸದ ಮಟ್ಟವನ್ನು ಕುರಿತು ವಿವರಸಿಲಾಗಿದ್ದು, ಇದರಲ್ಲಿ 141(47%) ಮಾಹಿತಿದಾರರು ಕಾಲೇಜು ಶಿಕ್ಷಣ ಮಟ್ಟವನ್ನು ಹೊಂದಿದ್ದಾರೆಂದು ತಿಳಿಸಿರುತ್ತಾರೆ. (ಕೋಷ್ಟಕ 5.1.75)

76. ದೈವರಾಧನೆಯನ್ನು ಮಾಡುವುದರಿಂದ ಸಮಾಜದಲ್ಲಿ ದೊರಕಿರುವ ಸ್ಥಾನಮಾನವನ್ನು ಕುರಿತು ಚರ್ಚಿಸಲಾಗಿದೆ. ಒಟ್ಟು 300 ಮಾಹಿತಿದಾರರಲ್ಲಿ, 158(52.7%) ಜನರು

ದೈವರಾಧನೆಯನ್ನು ಮಾಡುವುದರಿಂದ ಸಮಾಜದಲ್ಲಿ ದೊರಕಿರುವ ಸ್ಥಾನಮಾನ ಸಾಧಾರಣ ಮಟ್ಟದಲ್ಲಿದೆ ಎಂದು ಸಂಶೋಧನೆತಿಂದ ತಿಳೀದು ಬಂದಿದೆ. (ಕೋಷ್ಟಕ 5.1.76)

6.2 ದೈವಾರಾಧನೆಯನ್ನು ನೋಡುವವರ ದೃಷ್ಠಿಕೋನದಲ್ಲಿ ಮಾನವಾಭಿವೃದ್ದಿ

1. ವಯಸ್ಸಿನಾಧಾರದ ಮೇಲೆ ಪ್ರಶ್ನಾವಳಿ ಹಂಚಿಕೆ ಮಾಡಿರುವುದರಲ್ಲಿ 109 (36.33%) ರಷ್ಟು ಜನರು 31–40 ಸರಾಸರಿ ವಯಸ್ಸಿನವರು ಭಾಗವಯಿಸುತ್ತಾರೆ. (ಕೋಷ್ಠಕ 5.2.1)
2. ಲಿಂಗಾಧಾರದ ಮೇಲೆ ಪ್ರಶ್ನಾವಳಿ ಹಂಚಿಕೆ ಮಾಡಿರುವುದರಲ್ಲಿ ಒಟ್ಟು 300 ಜನರಲ್ಲಿ 213 (71%) ರಷ್ಟು ಜನರು ಪುರುಷರಾಗಿದ್ದಾರೆ. (ಕೋಷ್ಠಕ 5.2.2)
3. ಮಾತೃಭಾಷೆಯಧಾರದ ಮೇಲೆ ಪ್ರಶ್ನಾವಳಿ ಹಂಚಿಕೆ ಮಾಡಿರುವುದರಲ್ಲಿ ಒಟ್ಟು 300 ಜನರಲ್ಲಿ 278 (92.67%) ರಷ್ಟು ಜನರು ತುಳು ಭಾಷೆಯನ್ನು ಮಾತನಾಡುತ್ತಾರೆ. (ಕೋಷ್ಠಕ 5.2.3)
4. ವಾಸ್ತವ್ಯದ ಸ್ಥಳಾಧಾರದ ಮೇಲೆ ಪ್ರಶ್ನಾವಳಿ ಹಂಚಿಕೆ ಮಾಡಿರುವುದರಲ್ಲಿ ಒಟ್ಟು 300 ಜನರಲ್ಲಿ 188 (62.67%) ರಷ್ಟು ಗ್ರಾಮೀಣ ಪ್ರದೇಶದವರಾಗಿದ್ದಾರೆ. (ಕೋಷ್ಠಕ 5.2.4)
5. ವೈವಾಹಿಕ ಅಂತಸ್ತಿನಧಾರದ ಮೇಲೆ ಪ್ರಶ್ನಾವಳಿ ಹಂಚಿಕೆ ಮಾಡಿರುವುದರಲ್ಲಿ ಒಟ್ಟು 300 ಜನರಲ್ಲಿ 151 (50.33%) ರಷ್ಟು ಜನರು ವಿವಾಹಿತರಾಗಿದ್ದಾರೆ. (ಕೋಷ್ಠಕ 5.2.5)
6. ವಿದ್ಯಾರ್ಹತೆಯಧಾರದ ಮೇಲೆ ಪ್ರಶ್ನಾವಳಿ ಹಂಚಿಕೆ ಮಾಡಿರುವುದರಲ್ಲಿ ಒಟ್ಟು 300 ಜನರಲ್ಲಿ 115 (38.33%) ರಷ್ಟು ಜನರು ಕಾಲೇಜು ಶಿಕ್ಷಣವನ್ನು ಪಡೆದಿದ್ದಾರೆ. (ಕೋಷ್ಠಕ 5.2.6)
7. ಮೂಲ ಉದ್ಯೋಗಧಾರದ ಮೇಲೆ ಪ್ರಶ್ನಾವಳಿ ಹಂಚಿಕೆ ಮಾಡಿರುವುದರಲ್ಲಿ ಒಟ್ಟು 300 ಜನರಲ್ಲಿ 116 (38.67%) ರಷ್ಟು ಜನ ಕೃಷಿ ಕಾರ್ಮಿಕರು ಪಾಲ್ಗಳ್ಳುತ್ತಾರೆ. (ಕೋಷ್ಠಕ 5.2.7)
8. ಎಲ್ಲಾ 300 (100%) ರಷ್ಟು ವೀಕ್ಷಕರು ದೈವರಾಧನೆಯಲ್ಲಿ ಭಾಗವಯಿಸುವವರಾಗಿದ್ದಾರೆ. (ಕೋಷ್ಠಕ 5.2.8)

9. ಅತಿ ಹೆಚ್ಚಿನವರು 123 (41%) ರಷ್ಟು ಜನರು ಐದರಿಂದ ಹತ್ತು ವರ್ಷಗಳಿನವರಾಗಿದ್ದಾರೆ. (ಕೋಷ್ಠಕ 5.2.9)
10. ದೈವರಾಧನೆಯಲ್ಲಿ ಭಾಗವಯಿಸಿದವರ ಅನುಭವಗಳಲ್ಲಿ 154 (51.33%)ರಷ್ಟು ವೀಕ್ಷಕರು ಆರ್ಥಿಕಾಭಿವೃದ್ದಿಯನ್ನು ಹೊಂದಿರುವುದಾಗಿ ತಿಳಿಸಿದ್ದಾರೆ. (ಕೋಷ್ಠಕ 5.2.10)
11. ಎಲ್ಲಾ 300 (100%) ರಷ್ಟು ವೀಕ್ಷಕರು ಹಲವು ಸಮಸ್ಯೆಗಳು ಪರಿಹಾರವಾಗಿದೆ ಎಂದು ತಿಳಿಸಿದ್ದಾರೆ. (ಕೋಷ್ಠಕ 5.2.11)
12. ದೈವರಾಧನೆಯಿಂದಾದ ಪರಿಹಾರಗಳಲ್ಲಿ 113 (37.67%) ರಷ್ಟು ವೀಕ್ಷಕರು ಕೌಟುಂಬಿಕ ಸಮಸ್ಯೆಯಿಂದ ಪರಿಹಾರ ಹೊಂದಿರುವುದಾಗಿ ತಿಳಿಸಿದ್ದಾರೆ. (ಕೋಷ್ಠಕ 5.2.12)
13. ಅತಿ ಹೆಚ್ಚಿನ 268 (89.33%) ರಷ್ಟು ವೀಕ್ಷಕರು ಆರೋಗ್ಯಾತ್ಮಕವಾದ ಸಮಸ್ಯೆಗಳು ಪರಿಹಾರವಾಗಿದೆ ಎಂದು ತಿಳಿಸಿದ್ದಾರೆ. (ಕೋಷ್ಠಕ 5.2.13)
14. ಯಾವ ಬಗೆಯ ಆರೋಗ್ಯಾತ್ಮಕ ಪರಿಹಾರಗಳಲ್ಲಿ 268 ಒಟ್ಟು ವಿಕ್ಷಕರಲ್ಲಿ 116 (43.28%) ರಷ್ಟು ಜನರು ಮಾನಸಿಕ ಸ್ಥಿರತೆಯನ್ನು ಹೊಂದಿರುವುದಾಗಿ ತಿಳಿಸಿದ್ದಾರೆ. (ಕೋಷ್ಠಕ 5.2.14)
15. ದೈವರಾಧನೆಯಿಂದ ಭಾಗವಯಿಸಿದರಿಂದಾದ ಜೀವನದಲ್ಲಾದ ಏಳಿಗೆಗಳಲ್ಲಿ 281 (93.67%) ರಷ್ಟು ವೀಕ್ಷಕರು ಅವರ ಜೀವನದಲ್ಲಿ ಏಳಿಗೆಗಳಾಗಿವೆ ಎಂದು ತಿಳಿಸಿದ್ದಾರೆ. (ಕೋಷ್ಠಕ 5.2.15)
16. ಒಟ್ಟು 281 (100%) ರಷ್ಟು ವೀಕ್ಷಕರಲ್ಲಿ, 132 (46.98%) ರಷ್ಟು ವೀಕ್ಷಕರು ಮನೆಯ ಮಕ್ಕಳ ವಿಧ್ಯಾಬ್ಯಾಸವು ಸುಧಾರಣೆಯಾಗಿದೆಯೆಂದು ತಿಳಿಸಿದ್ದಾರೆ. (ಕೋಷ್ಠಕ 5.2.16)
17. ದೈವರಾಧನೆಯಿಂದಾದ ತೃಪ್ತಿಯ ಕುರಿತು ತಿಳಿಸಲಾಗಿದ್ದು, ಒಟ್ಟು 300 ವೀಕ್ಷಕರಲ್ಲಿ, 247 (82.33%) ರಷ್ಟು ಜನರು ತುಂಬಾ ತೃಪ್ತಿದಾಯಕವಾಗಿದೆ ಎಂದು ತಿಳಿಸಿದ್ದಾರೆ. (ಕೋಷ್ಠಕ 5.2.17)

7. ಸಂಶೋಧನಾ ಸಲಹೆಗಳು

1. ದೈವನರ್ತಕರ ಸಂಖ್ಯೆ ಕಡಿಮೆಯಾಗುತ್ತಿರುವುದರ ಬಗ್ಗೆ ಸಂಶೋಧನೆಯಲ್ಲಿ ಸ್ಪಷ್ಟಪಡಿಸಲಾಗಿದ್ದು, ಶೇಕಡಾ 45.3% ರಷ್ಟು ಮಂದಿ ಅದನ್ನು ಒಪ್ಪಿಕೊಂಡಿದ್ದಾರೆ. ಹಾಗಾಗಿ ಇವರ ಕೊರತೆಗಳನ್ನು ಅರಿತುಕೊಂಡು ಇವರಿಗೆ ಸರ್ಕಾರದ ಮಟ್ಟದಲ್ಲಿ ಹಲವು ಸೌಲಭ್ಯಗಳನ್ನು ನೀಡಬೇಕಾಗಿರುತ್ತದೆ.
2. ದೈವನರ್ತಕರ ಸಂಖ್ಯೆ ಕಡಿಮೆಯಾಗುತ್ತಿರುವುದರಲ್ಲಿ ಕಾರಣವನ್ನು ಕೇಳಲಾಗಿದ್ದು 164 ರಷ್ಟು ಮಂದಿಯೂ ಜಾತಿ ತಾರತಮ್ಯದಿಂದಾಗಿ ಕಡಿಮೆಯಾಗುತ್ತಿದೆ ಎಂದು ತಿಳಿದುಬಂದಿರುತ್ತದೆ. ಹಾಗಾಗಿ ಎಲ್ಲರಲ್ಲೂ ಸಮಾನತೆಯನ್ನು ಮೂಡಿಸಲು ಸರ್ಕಾರವು ಗಮನಹರಿಸಬೇಕಾಗಿರುತ್ತದೆ.
3. ದೈವನರ್ತಕರಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಗಮನಹರಿಸಬೇಕಾಗಿದೆ.
4. ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಸರ್ಕಾರವು ಹೆಚ್ಚಿನ ಸವಲತ್ತುಗಳನ್ನು ನೀಡಿ ಆರ್ಥಿಕ ಸೌಲಭ್ಯದೊಂದಿಗೆ ಉಚಿತ ಶಿಕ್ಷಣಕ್ಕೆ ಪ್ರಾಮುಖ್ಯತೆಯನ್ನು ನೀಡಬೇಕಾಗಿದೆ, ಜೊತೆಗೆ ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ಮುಂದುವರಿಸಲು ಜಾಗೃತಿಯನ್ನು ಮೂಡಿಸಬೇಕಾಗಿರುತ್ತದೆ.
5. ಕನಿಷ್ಟ ಮೂಲಭೂತ ಸವಲತ್ತುಗಳು ಸಹ ಇರದ ಹಾಗೂ ಸಮಾಜದ ಮುಖ್ಯವಾಹಿನಿಂದ ದೂರದವಿರುವ ಪಂಜುರ್ಲಿ ದೈವನರ್ತಕರನ್ನು ಪತ್ತೆ ಹಚ್ಚಿ ಅವರಿಗೆ ಸವಲತ್ತುಗಳನ್ನು ಒದಗಿಸಿಕೊಡುವುದು.
6. ನಳಿಕೆ ಸಮುದಾಯದ ಯುವಕ, ಯುವತಿಯರಿಗೆ ಅವರ ಪಡೆದ ಶಿಕ್ಷಣಕ್ಕೆ ಅನುಗುಣವಾಗಿ ಅವರಿಗೆ ಸೂಕ್ತವಾದ ಉದ್ಯೋಗದ ಅವಕಾಶವನ್ನು ಒದಗಿಸಿಕೊಡುವುದು.
7. ಸರ್ಕಾರವು ನೀಡುವ ಸವಲತ್ತು, ಸೌಕರ್ಯಗಳನ್ನು ಕುರಿತು ಮಾಹಿತಿಯನ್ನು ಒದಗಿಸಿಕೊಡುವಲ್ಲಿ ಸ್ಥಳೀಯ ಸಂಸ್ಥೆಗಳು ಪ್ರಧಾನ ಪಾತ್ರವನ್ನು ವಹಿಸುವುದು. .
8. ನಳಿಕೆ ಸಮುದಾಯದ ಮಹಿಳೆಯರಿಗೆ ಸೂಕ್ತವಾದ ಸ್ವಉದ್ಯೋಗವನ್ನು ನೀಡಿ ಪ್ರೋತ್ಸಾಹಿಸುವುದು.
9. ಸಮುದಾಯದ ದೈವ ನರ್ತಕರಿಗೆ ಸರಕಾರದ ವತಿಯಿಂದ ಪಿಂಚಣಿಯನ್ನು ಒಡಗಿಸುವ ವ್ಯವಸ್ತೆಯನ್ನು ಮಾಡುವುದು.

8. ಮುಂದಿನ ಸಾಧ್ಯತೆಗಳು

1. ನಳಿಕೆ ಸಮುದಾಯ ಮತ್ತು ದೈವ ನರ್ತನೆ ಮಾಡುವ ಪರವ, ಸಮುದಾಯಗಳ ಜೊತೆ ಮಾನವಾಭಿವೃದ್ದಿಯ ಕುರಿತು ತೌಲನಿಕ ಅಧ್ಯಯನ ಮಾಡುವ ಸಾಧ್ಯತೆಗಳಿವೆ.

2. ಪರವ, ಪಂಬದ, ಬಾಕುಡ, ಸಮುದಾಯಗಳ ಕುರಿತು ಮಾನವಾಭಿವೃದ್ದಿಯ ಅಧ್ಯಯನವನ್ನು ಮಾಡಬಹುದಾಗಿದೆ.

3. ಪ್ರಸ್ತುತ ಅಧ್ಯಯನವು ಪಂಜುರ್ಲಿ ದೈವವನ್ನು ಕುರಿತಾಗಿದ್ದು, ಇನ್ನೂ ಬೇರೆ ಬೇರೆ ರೀತಿಯಾದಂತಹ ದೈವಗಳಾದ ಗುಳಿಗ ದೈವ, ರಾಜನ್ ದೈವ, ಕೊರಗ ತನಿಯ ಮುಂತಾದ ದೈವಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಪರಾಮರ್ಶನ ಗ್ರಂಥಗಳು

1. ಉಗಪ್ಪ ಪೂಜಾರಿ. ತುಳುನಾಡ ದೈವಲೆ ಉದೀಪು _,(ಬೀರ ,ಪಾರಿ, ಮದಿಪು)–ಸ್ವಯಂ ಪ್ರಕಾಶನ ಮಂಗಳೂರು ತಾಲೂಕು –2015
2. ಭೂತರಾಧನೆಯ ಬಣ್ಣಗಾರಿಕೆ ಸಂಪಾದಕರು ಡಾಕ್ಟರ್ ಬಿ ಎ ವಿವೇಕ ರೈ, ಯದುಪತಿ ಗೌಡ, ರಾಜಶ್ರೀ–ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳುಪೀಠ. ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ– 2001
3. ಗ್ರಾಮದೈವ ಶ್ರೀ ಅಲೆತ್ತೂರ ಪಂಜುರ್ಲಿ–ಸಂಕೇತ್ ಪೂಜಾರಿ–ಸತ್ತಿಗೆ ಪ್ರಕಾಶನ ಬಂಟ್ವಾಳ ತಾಲೂಕು ಪೆರ್ನೆ –2017
4. ದೈವಾರಾಧನೆ ಜಿಜ್ಞಾಸೆಗಳು–ಬನ್ನಂಜೆ ಬಾಬು ಅಮೀನ್, ಕೆಮ್ಮಲಜೆ ಜಾನಪದ ಪ್ರಕಾಶನ, ನಿಟ್ಟೂರು, ಉಡುಪಿ, 2016.
5. ಪೂ ಅರಿ,–, ಮದಿಪು, ನುಡಿಕಟ್ –ನವೀನ್ ಸುವರ್ಣ ಪಡ್ರೆ, ಶ್ರೀ ಬಬ್ಬು ಸ್ವಾಮಿ ಅಧ್ಯಯನ ಕೇಂದ್ರ ಸುರತ್ಕಲ್–2023.
6. ನಡುವಣ ಲೋಕದ ನಡೆ ,–ದೈವಾರಾಧನೆ ನೆಲೆ ಕಲೆ–ಕೆ ಎಲ್ .ಕುಂಡಂತಾಯ ಸರಸ್ವತಿ ಪ್ರಕಾಶನ ಕೊಂಜೂರು. 2022.
7. ದೈವ ನೆಲೆ–ಬನ್ನಂಜೆ ಬಾಬು ಅಮೀನ್ –ಕೆಮ್ಮಲಜೆ ಜಾನಪದ ಪ್ರಕಾಶನ–ನಿಟ್ಟೂರು ಉಡುಪಿ,–2023.
8. ತುಳುನಾಡ ದೈವಗಳು (ಜಾನಪದ ಸಂಕಲನ). ಬನ್ನಂಜೆ ಬಾಬು ಅಮೀನ್. ಕೆಮ್ಮಲಜೆ ಜಾನಪದ ಪ್ರಕಾಶನ, ನಿಟ್ಟೂರು ಉಡುಪಿ. 2018
9. ತುಳುನಾಡ ದೈವಗಳು ಸಾಂಸ್ಕೃತಿಕ ವಿಶ್ಲೇಷಣೆ, –ಬನ್ನಂಜೆ ಬಾಬು ಅಮೀನ್ ಕೆಮ್ಮಲಜೆ ಜಾನಪದ ಪ್ರಕಾಶನ, ನಿಟ್ಟೂರು, ಉಡುಪಿ, 2016
10. ತುಳು ಜನಪದ ಕಾವ್ಯ ಇಹಪರ ಲೋಕ ದೃಷ್ಟಿ –ಡಾ. ರಾಜಶ್ರೀ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳುಪೀಠ–ಮಂಗಳೂರು ವಿಶ್ವವಿದ್ಯಾಲಯ –.2008
11. ನುಡಿಕಟ್ (ತುಳು ಜನಪದೀಯ ಪ್ರಾರ್ಥನೆಗಳ ಸಂಕಲನ)–ಅಣ್ಣಂಗೆ ಬಾಬು ಅಮೀನ್, ಕೆಮ್ಮಲಜೆ ಜಾನಪದ ಪ್ರಕಾಶನ ನಿಟ್ಟೂರು ಉಡುಪಿ –2010.
12. ಮಾಯಾ ಮತ್ತು ಜೋಗ,–ಗಣೇಶ್ ಅಮಿನ್ ಶಂಕಮಾರ್,2009

13. ಅತ್ತಾವರ ದೆಂಯೋಗೋಳು, ಅರಸು (ಅಣ್ಣ –ತಮ್ಮ), ಮುಂಡತ್ತಾಯ ಮತ್ತು ಪರಿವಾರ ದೈವಗಳು–ಪ್ರಶಾಂತ್ ರಾಮ್ ಕೊಟ್ಟಾರಿ. ಪವಮಾನ ಪ್ರಕಾಶನ, ಮಂಗಳೂರು.2013.
14. ಪ್ರೊ.ಎ ವಿ ನಾವಡ. ಮತ್ತು ಡಾ. ಗಾಯತ್ರಿ ನಾವಡ, ಪಾಣಾರಾಟ, ಕನ್ನಡ ಸಾಹಿತ್ಯ ಸಮ್ಮೇಳನ 2007. ಉಡುಪಿ
15. ಸಾವಿರದ ಸತ್ಯಗಳು. ಡಾ. ಗಣೇಶ್ ಅಮಿನ್ ಸಂಕಮಾರ್ ಸಿರಿ ಪ್ರಕಾಶನ ಪಾವಂಜೆ ಮಂಗಳೂರು 2018
16. ದೈವರಾಧನೆ ಸಾಂಸ್ಕೃತಿಕ ಅಧ್ಯಯನ ಡಾ. ನವೀನ್ ಕುಮಾರ್ ಮರಿಕೆ .ಸಿರಿಮುಡಿ ಪ್ರಕಾಶನ ಪುತ್ತೂರು. 2017.
17. ದೈವದ ಮದೀಪು, ಡಾ. ಹರಿಶ್ಚಂದ್ರ ಪೀ. ಸಾಲಿಯಾನ್ ಮುಲ್ಕಿ ಹೊಸಂಗಣ ಪ್ರಕಾಶನ ಮುಲ್ಕಿ –
18. ನುಡಿ ಸಿಂಗಾರ, ಗಣೇಶ್ ಅಮೀನ್ ಶಂಕಮಾರ್. ಸಿರಿ ಪ್ರಕಾಶನ ಅಸೆಗಳಿ ಪಾವಂಜೆ – 2006.
19. ನಾಡಿನ ಪ್ರಾಣಿ ಜಾನಪದ ಡಾ. ಅಶೋಕ ಆಳ್ವ. ಸಿರಿ ಕಮಲ ಪ್ರಕಾಶನ ಉಡುಪಿ– 2021.
20. ತುಳುನಾಡಿನ ಕಟ್ಟುಕಟ್ಟಲೆಗಳು ಡಾ. ಹರೀಶ್ ಚಂದ್ರ ಪಿ ಸಾ ಲಿಯಾನ್. ಹೊಸ ಅಂಗಳ ಪ್ರಕಾಶನ .ಮುಲ್ಕಿ– 20 20.
21. ತುಳುನಾಡ ದೈವಗಳು ವಿಶ್ವನಾಥ –ಪಂಜಿ ಪೊಗರು, ಚಿನ್ಮಯ ಪ್ರಕಾಶನ, ಬೆಂಗಳೂರು. 2023.
22. ಆಣಿ ಅರದಲ ಸಿರಿ ಸಿಂಗಾರ ಸಂಪಾದಕರು ಎಚ್.ಬಿ ಎಲ್. ರಾವ್, ಕೆ.ಎಲ್. ಕುಂಡಂತಾಯ. ಸಾಹಿತ್ಯ ಬಳಗ ನವ ಮುಂಬೈ.2016.
23. ವೈದ್ಯನಾಥ ದೈವ ಮಾಯಾ ಮತ್ತು ಜೋಗದ ಬೆಳಕಿನಲ್ಲಿ (ಕರಾವಳಿ ಸಾವಿರದೊಂದು ದೈವಗಳು). ಡಾ.ಲಕ್ಷ್ಮಿ ಜಿ.ಪ್ರಸಾದ್ ಮಾತೃಶ್ರೀ ಪ್ರಕಾಶನ –ಬೆಂಗಳೂರು.
24. ಪಾಲ್ತಾಡಿ ರಾಮಕೃಷ್ಣ ಆಚಾರ್. (2013) ತುಳುನಾಡಿನ ಪಾಣಾರರು: ಜನಾಂಗೀಯ ಅಧ್ಯಯನ. ಶ್ರೀನಿವಾಸ ಪುಸ್ತಕ ಪ್ರಕಾಶನ. ಬೆಂಗಳೂರು
25. ಗೌಡ, ಚಿನ್ನಪ್ಪ ಕೆ. (2003). ಸಂಸ್ಕೃತಿ ಸಿರಿ. ಮದಿಪು ಪ್ರಕಾಶನ. ಮಂಗಳಗಂಗೋತ್ರಿ
26. ಪ್ರೊ. ಎ ವಿ ನಾವಡ. ಮತ್ತು ಡಾ. ಗಾಯತ್ರಿ ನಾವಡ (2014) ಕನ್ನಡ ಸಂಪ್ರದಾಯದ ದೈವರಾಧನೆ: ಪಾಣಾರಾಟ. ಸಿವಿಜಿ ಇಂಡಿಯಾ. ಬೆಂಗಳೂರು.

27. ಪ್ರೊ.ಎ ವಿ ನಾವಡ. (2007) ಕರಾವಳಿ ಜಾನಪದ. 27ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಉಡುಪಿ

28. ಕೃಷ್ಣಯ್ಯ ಗೌಡ, ಎಚ್. ಆರ್.(2021). ಸಂಶೋಧಾ ವಿಧಾನಶಾಸ್ತ್ರ. ಸ್ಪಂದನ ಪ್ರಕಾಶನ. ಮೈಸೂರು

ಪ್ರೊ. ಸೋಮಣ್ಣ
ಮಾರ್ಗದರ್ಶಕರು

ರವಿ, ಎನ್.
ಸಂಶೋಧಕರು